ರಸ್ತೆ ಇನ್ನಿತರ ಸೌಲಭ್ಯಗಳು automatic ಆಗಿ ಎಲ್ಲಾ ಅಲ್ಲಿಗೆ ಬಂದು ಬಿಡುತ್ತದೆ. ಮಂಡ್ಯ ಜಿಲ್ಲೆ, ಚಾಮರಾಜ ನಗರ, ಮೈಸೂರು ಮತ್ತು ಕೊಡಗು ಈ ಭಾಗಗಳಲ್ಲೂ ಸಹ ಪ್ರವಾಸೋದ್ಯಮಕ್ಕೆ ಸಾಕಷ್ಟು ಅವಕಾಶಗಳಿವೆ. Potential ಇದೆ. ಆ potential ಅನ್ನು ಕ್ರಮೇಣ ನಾವು definitely trap ಮಾಡುತ್ತೇವೆ.

ಶ್ರೀ ಉಪಾಧ್ಯಕ್ಷರು:– Ok.

ಶ್ರೀ ಬಿ.ನಾರಾಯಣಗೌಡ:– ತಾವು ಪ್ರೈವೇಟ್‌ನವರಿಗೆ ಅವಕಾಶ ಕೊಟ್ಟರೆ, ಅದನ್ನು ಮುಂದುವರೆಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಉಪಾಧ್ಯಕ್ಷರು:– ತಾವು ಆಮೇಲೆ ಮಾತನಾಡಿ, ಈಗ ಮಾನ್ಯ ಮಂತ್ರಿಯವರು ಉತ್ತರ ಕೊಡಲಿ.

ಆ. 2014–15ನೇ ಸಾಲಿನ ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ನಡೆದ ಚರ್ಚೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರ

ಶ್ರೀ ಕಿಮ್ಮನೆ ರತ್ನಾಕರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ಸುಮಾರು 16,000 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಡೆಯುತ್ತಿದೆ. ಬಹಳಷ್ಟು ಸದ್ಯರಿಗೆ ಮತ್ತು ಸಾರ್ವಜನಿಕವಾಗಿಯೂ ಕೂಡ ಶಿಕ್ಷಣ ಇಲಾಖೆಗೆ ಬಹಳಷ್ಟು ಹಣ ಹೋಗುತ್ತಿದೆ, ಅದು ಎಲ್ಲಿ ಹೋಗುತ್ತಿದೆ ಎನ್ನುವ ಗೊಂದಲಗಳು, ಅನುಮಾನಗಳಿದ್ದು, ಸಾರ್ವತ್ರಿಕವಾಗಿ ಅನೇಕ ಹೇಳಿಕೆಗಳೂ ಬಂದಿವೆ. ವಾಸ್ತವಿಕವಾಗಿ ಯಾವ ಯಾವ ವೆಚ್ಚಕ್ಕೆ ಈ ಹಣ ವಿನಿಯೋಗವಾಗುತ್ತದೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಚರ್ಚೆಯಲ್ಲಿ ಸನ್ಮಾನ್ಯ ಸದಸ್ಯರಾಗಿರುವಂಥ ಕೋನರೆಡ್ಡಿಯವರು, ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಈಶ್ವರ ಖಂಡ್ರೆಯವರು, ಡಿ.ಸಿ.ತಮ್ಮಣ್ಣನವರು, ರಾಜೀವ್ ಕುಡಚಿಯವರು, ರುದ್ರಪ್ಪ ಮಾನಪ್ಪ ಲಮಾಣಿಯವರು, ತಿಪ್ಪರಾಜುರವರು ಮತ್ತು ಡಾ:– ಅಶ್ವತ್ಥನಾರಾಯಣರವರು ಇವರೆಲ್ಲರೂ ಪ್ರಮುಖವಾಗಿ ನಮ್ಮ

ಇಲಾಖೆಯಲ್ಲಿರುವ ಅನೇಕ ಸಮಸ್ಯೆಗಳನ್ನು ಕುರಿತು ನಮ್ಮನ್ನು ಜಾಗೃತಗೊಳಿಸತಕ್ಕಂಥ ಮತ್ತು ಮಾರ್ಗದರ್ಶನ ಕೊಡತಕ್ಕಂಥ, ಕೆಲವು ಸಲಹೆಗಳನ್ನು ಕೊಡುವಂಥಾದ್ದನ್ನು ಮಾಡಿದ್ದಾರೆ. ನಮ್ಮ ಇಲಾಖೆಗೆ ಬರುವಂಥ 16,000 ಕೋಟಿ ರೂ.ಗಳ ವೆಚ್ಚದಲ್ಲಿ ಸುಮಾರು ಹನ್ನೊಂದೂವರೆ ಸಾವಿರದಿಂದ ಹನ್ನೆರಡು ಸಾವಿರ ಕೋಟಿ ರೂಪಾಯಿಗಳವರೆಗೆ ಅರಣ್ಯ ಇಲಾಖೆಯ ವೇತನಕ್ಕೇ ಹೋಗುತ್ತದೆ ಎನ್ನುವುದನ್ನು ನಾನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಪ್ರಮುಖವಾಗಿ ನಮ್ಮ ಇಲಾಖೆಯ ವ್ಯಾಪ್ತಿಗೆ ಒಂದನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗೆ ಸುಮಾರು ಒಂದು ಕೋಟಿ ನಾಲ್ಕು ಸಾವಿರ ವಿದ್ಯಾರ್ಥಿಗಳು ಬರುತ್ತಾರೆ. ಅಂದರೆ ಸುಮಾರು ಎರಡು ಕೋಟಿ ಜನ ಪೋಷಕರು ಇದರ ಜೊತೆಗಿದ್ದಾರೆ. ನಮ್ಮ ರಾಜ್ಯದಲ್ಲಿರುವ 6 ಕೋಟಿ 11 ಲಕ್ಷ ಜನಸಂಖ್ಯೆಯಲ್ಲಿ ಸುಮಾರು ಮೂರು ಕೋಟಿ ಜನ ನಿತ್ಯದ ಬದುಕಿನಲ್ಲಿ ಈ ಇಲಾಖೆಗೆ ಸಂಬಂಧಪಟ್ಟಿರುವಂಥ ವ್ಯವಸ್ಥೆಯಲ್ಲಿ ಬರುತ್ತಾರೆ ಎನ್ನುವುದನ್ನೂ ಕೂಡ ನಾವು ಗಮನ ಹರಿಸಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಸರ್ಕಾರಕ್ಕೆ ಸೇರಿರುವ ಸುಮಾರು ಐವತ್ತು ಸಾವಿರ ಶಾಲೆಗಗಳಿವೆ. ಈ ಐವತ್ತು ಸಾವಿರ ಶಾಲೆಗಳಿಗೆ ಐವತ್ತು ಸಾವಿರ ಕಟ್ಟಡಗಳೂ ಇವೆ. ರಾಜ್ಯ ಸರ್ಕಾರದಲ್ಲಿ ಕಾರ್ಯ ನಿರ್ವಹಿಸತಕ್ಕಂಥ ಒಟ್ಟು 5 ಲಕ್ಷದ 60 ಸಾವಿರ ಸರ್ಕಾರಿ ಅಧಿಕಾರಿ, ನೌಕರರಲ್ಲಿ 3 ಲಕ್ಷ ಜನ ಶಿಕ್ಷಕರು ಮತ್ತು ಇಲಾಖೆಗೆ ಸೇರಿದ ಇತರ ಸಿಬ್ಬಂದಿಯವರಾಗಿದ್ದಾರೆ. ಅಂದರೆ ಸುಮಾರು 40–45% ನೌಕರ ವರ್ಗ ನಮ್ಮ ಇಲಾಖೆಗೆ ಸೇರಿದ್ದಾರೆ ಎನ್ನುವುದನ್ನೂ ಕೂಡ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಪ್ರತಿದಿನ ಯಾವುದೇ ಮಾಧ್ಯಮಗಳಲ್ಲಿ ನೋಡಿದರೂ, ಯಾವುದೇ ಪತ್ರಿಕೆಯನ್ನು ತೆಗೆದು ನೋಡಿದರೂ ಯಾವುದಾದರೂ ಒಂದು ಪುಟದಲ್ಲಿ ನಮ್ಮ ಇಲಾಖೆಗೆ ಸಂಬಂದಪಟ್ಟಂಥ ಏನಾದರೂ ಒಂದು ಘಟನೆ ನಡೆದಿದ್ದರೆ, ಅದು ಪೋಷಕರ ಮೂಲಕ ಆಗಿರಬಹುದು ಅಥವಾ ಶಿಕ್ಷಕರ ಮೂಲ ಆಗಿರಬಹುದು, ಹೀಗೆ ಯಾವುದೇ ಆಗಲಿ ಬಂದಿರುತ್ತದೆ.

ಶ್ರೀ ಎನ್.ಹೆಚ್.ಕೋನರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣ ಇಲಾಖೆ ಬಹಳ ಪ್ರಮುಖವಾದಂಥ ಇಲಾಖೆ. ಆದ್ದರಿಂದ ಉತ್ತರವನ್ನು ಸೋಮವಾರ ಕೊಟ್ಟಿದ್ದರೆ ಚೆನ್ನಾಗಿತ್ತು. ಬಹಳ ಮಹತ್ವವಾದ ಇಲಾಖೆ ಇದು. ಇದಕ್ಕೆ ಎರಡು ತಾಸು ಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ:- ಇದರ ಮೇಲೆ ಚರ್ಚೆಯಾಗಬೇಕು. ಸೋಮವಾರಕ್ಕೆ ಹಾಕಿಕೊಳ್ಳಿ. ತರಾತುರಿಯಲ್ಲಿ ಆಗಬಾರದು, ಬಹಳ ಪ್ರಮುಖವಾದ ಇಲಾಖೆ ಇದು.

ಶ್ರೀ ಉಪಾಧ್ಯಕ್ಷರು:- ಅವರು ಉತ್ತರ ಹೇಳಲಿ. ಹೇಳಿದ ಮೇಲೆ ಬೇಕಾದರೆ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಕಿಮ್ಮನೆ ರತ್ನಾಕರ್:- ಬಹಳ ಪ್ರಮುಖವಾದ ಅಂಶಗಳನ್ನು ಮಾತ್ರ ನಾನು ಹೇಳಲು ಹೋಗುತ್ತೇನೆ. ನಾನು ಈ ಇಲಾಖೆಗೆ ಬಂದ ಸಂದರ್ಭದಲ್ಲಿ ಅಂದರೆ ಕಳೆದ ವರ್ಷ ಮೇ 20ನೇ ತಾರೀಖಿನ ಸಂದರ್ಭದಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳನ್ನು ಬೆಳಿಗ್ಗೆ ಹತ್ತು ಗಂಟೆಗೆ ಮೀಟಿಂಗ್ ಕರೆದು ಒಂದು ಮಾತನ್ನು ಹೇಳಿದ್ದೆ. ಮುಂದಿನ ಜೂನ್ ಒಂದನೇ ತಾರೀಖಿಗೆ ಶಾಲಾ ಮಕ್ಕಳಿಗೆ ಪುಸ್ತಕ ಮತ್ತು ಯೂನಿಫಾರಂಅನ್ನು ಕೊಡಬೇಕು ಎನ್ನುವ ತೀಮಾನವನ್ನು ತೆಗೆದುಕೊಳ್ಳಬೇಕು. ಅದಕ್ಕೆ ಏನು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ನೀವು ಇವತ್ತೇ ತೆಗೆದುಕೊಳ್ಳಬೇಕು, ಅದಕ್ಕೆ ಪೂರಕವಾಗಿರುವಂಥ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಕಳೆದ ಅನೇಕ ವರ್ಷಗಳಿಂದ ಜೂನ್ ಒಂದನೇ ತಾರೀಖಿಗೆ ಪುಸ್ತಕಗಳನ್ನು ಮತ್ತು ಯೂನಿಫಾರಂ ಕೊಡುವುದಕ್ಕೆ ಆಗುತ್ತಿಲ್ಲ ಎಂದರೆ it is a defect on the part of the administration ಎನ್ನುವ ತೀರ್ಮಾನಕ್ಕೆ ನಾನು ಬರಬೇಕಾಗುತ್ತದೆ. ಅದಕ್ಕೆ ಪೂರಕವಾಗಿರುವಂಥ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ನಾನು ಮೇ 20ನೇ ತಾರೀಖು ಕಳೆದ ವರ್ಷವೇ ತೀರ್ಮಾನ ತೆಗೆದುಕೊಂಡು ನಿರ್ದೇಶನ ಕೊಟ್ಟಿದ್ದೆನು. ಅದರಂತೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಇರುವ ವಿದ್ಯಾರ್ಥಿಗಳಿಗೆ ಜೂನ್ ಒಂದನೇ

ತಾರೀಖಿನ ಹೊತ್ತಿಗೆ ಪುಸ್ತಕ ಹಾಗೂ ಯೂನಿಫಾರಂಗಳನ್ನು ಕೊಡುವುದರಲ್ಲಿ ಸುಮಾರು 90% we have reached. 15ನೇ ತಾರೀಖಿನೊಳಗೆ update ಮಾಡುವಂಥ ಪ್ರಯತ್ನವನ್ನು ಮಾಡಿದ್ದೇವೆ. ಇದರಲ್ಲಿ, ಒಂದು ಹಂತದಲ್ಲಿ ನಾವು ಯಶಸ್ಸನ್ನು ಸಾಧಿಸಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇದರ ಜೊತೆಗೆ, ನಮ್ಮ ಸರ್ಕಾರ ಬಂದ ಮೇಲೆ ಏನು ಮಾಡಿದೆ ಎನ್ನುವ ಕೆಲವು ಪ್ರಮುಖ ಅಂಶಗಳನ್ನು ಅಂದರೆ, ಅನೇಕ ವರ್ಷಗಳಿಂದ ಉಳಿದಿರುವ ಸಮಸ್ಯೆಗಳನ್ನು ಬಗೆಹರಿಸುವುಲ್ಲಿ ನಾವು ಏನು ಯಶಸ್ಸು ಕಂಡಿದ್ದೇವೆ ಎನ್ನುವುದನ್ನೂ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. 1994–95ರಿಂದ ಅಂದರೆ ಸುಮಾರು 20 ವರ್ಷಗಳಿಂದ ಸುಮಾರು 308 ಅನುದಾನರಹಿತ ಶಾಲೆಗಳವರು ನಮ್ಮನ್ನು ಅನುದಾನಕ್ಕೆ ಒಳಪಡಿಸಿ ಎಂದು ಸ್ಟ್ರೈಕ್ ಮಾಡಿಕೊಂಡು ಬಂದಿದ್ದರು ಎನ್ನುವುದನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಈ 308 ಶಾಲೆಗಳಿಗೆ ಮಾನ್ಯಮುಖ್ಯಮಂತ್ರಿಗಳು ತಾತ್ವಿಕವಾಗಿ ಒಪ್ಪಿಗೆ ಕೊಟ್ಟು ಅನುದಾನವನ್ನು ಬಿಡುಗಡೆ ಮಾಡುವುದರ ಮೂಲಕ 308 ಶಾಲೆಗಳನ್ನು ಅನುದಾನಕ್ಕೆ ಒಳಪಡುವಂಥ ವ್ಯವಸ್ಥೆಗೆ ಒಳಪಡಿಸಿದೆವು. ಅವರು ಕಳೆದ 15–20 ವರ್ಷಗಳಿಂದ ಸ್ಟ್ರೈಕ್ ಮಾಡುತ್ತಿದ್ದರು. ಅವರಲ್ಲಿ ಕೆಲವರು, ಅನುದಾನಕ್ಕೆ ಒಳಪಡಿಸದಿದ್ದರೆ ನಾವು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎನ್ನುವ ಘಟ್ಟಕ್ಕು ಹೋಗಿದ್ದರು. ಅಂಥ ಸಂದರ್ಭದಲ್ಲಿ ನಾವು ಈ 308 ಶಾಲೆಗಳಿಗೆ ಅನುದಾನಕ್ಕೆ ಒಪ್ಪಿಗೆ ಕೊಡುವಂಥ ಪ್ರಯತ್ನವನ್ನು ಮಾಡಿದ್ದೇವೆ. ಮತ್ತೊಂದು ಬಹಳ ಪ್ರಮುಖವಾದ ಅಂಶವೆಂದರೆ, 2008ರಲ್ಲಿ B.Ed. ಮಾಡದೇ ಇರುವವರನ್ನೂ ಕೂಡ gazette notification ಮಾಡುವುದರ ಮೂಲಕ ಪಿ.ಯು. ಕಾಲೇಜುಗಳಿಗೆ ಅಧ್ಯಾಪಕರನ್ನಾಗಿ ನೇಮಕಾತಿಯನ್ನು ಮಾಡಲಾಗಿತ್ತು. Appointment on Lecturers is made only on merit basis. ಆ ಸಂದರ್ಭದಲ್ಲಿ B.Ed. ಅನ್ನು ಕಡ್ಡಾಯಗೊಳಿಸದೇ ಅವರನ್ನು ನೇಮಕ ಮಾಡಿಕೊಂಡಿದ್ದರಿಂದ ಒಂದು ದೊಡ್ಡ ಸಮಸ್ಯೆ ನಿರ್ಮಾಣವಾಯಿತು. 1349 ಜನ ಅಧ್ಯಾಪಕರು B.Ed. ಮಾಡದೇ ಇರುವ ಕಾರಣಕ್ಕಾಗಿ ಅವರ probationary period confirm ಆಗಿರಲಿಲ್ಲ. ನಮ್ಮ ರಾಷ್ಟ್ರೀಯ ವಿದ್ಯಾ

ನೀತಿಯ ಪ್ರಕಾರ ಎನ್ನುವುದು B.Ed. is mandatory ಎನ್ನುವುದು ಇತ್ತು. ಅದನ್ನು ಗಮನಕ್ಕೆ ತೆಗೆದುಕೊಳ್ಳದೇ ನೇಮಕಾತಿ ಮಾಡಿಕೊಂಡಿದ್ದು ಒಂದು ದೊಡ್ಡ ದುರಂತವಾಗಿ ಹೋಯಿತು. ಹಾಗಾಗಿ, ಅವರು ನಾಲ್ಕೈದು ವರ್ಷಗಳಿಂ ಸ್ಟ್ರೈಕ್ ಮಾಡುತ್ತಿದ್ದರು. ಅವರಿಗೆ ರಿಲೀಫ್ ಕೊಟ್ಟಿರಲಿಲ್ಲ ನಮ್ಮ ಸರ್ಕಾರದ ಅವಧಿಯಲ್ಲಿ ಅವರು ಸ್ಟ್ರೈಕ್ ಮಾಡಿದ್ದು ಒಂದು ದಿವಸ ಮಾತ್ರ. ಅವರು ಬಂದು ನನ್ನ ಹತ್ತಿರ ಇಂಥಾದ್ದೊಂದು ಸಮಸ್ಯೆಯಿಂದ ಎಂದು ಹೇಳಿದ್ದರು. ಅವರಿಗೆ ನಾನು 23–24ನೇ ತಾರೀಖಿನಂದು ಬನ್ನಿ, ಇದರ ಬಗ್ಗೆ ನಾನು ಮಾತನಾಡುತ್ತೇನೆ ಎಂದು ಹೇಳಿದ್ದೆ. ಆ ದಿನವನ್ನೇ ಅವರು ಸ್ಟ್ರೈಕ್ ದಿನವಾಗಿ ಪರಿವರ್ತಿಸಿಕೊಂಡರು. ಆದರೆ ಅದೇ ದಿನ ನಾವು ಅವರಿಗೆ ಆಶ್ವಾಸನೆ ಕೊಟ್ಟೆವು. ಅದರಂತೆಯೇ ಮಾನ್ಯ ಮುಖ್ಯಮಂತ್ರಿಗಳು ಯಾರ್‍ಯಾರು B.Ed ಮಾಡಿರಲಿಲ್ಲ, ಅವರೆಲ್ಲರಿಗೂ ಕೂಡ ವೇತನ ಪಡೆದು, B.Ed. ಗೆ ಹೋಗುವಂಥ ಅವಕಾಶ ಮಾಡಿಕೊಟ್ಟು, ಅದನ್ನು ಹತ್ತು ತಿಂಗಳಲ್ಲಿ ಮುಗಿಸಬೇಕೆಂದು ಅವಕಾಶ ಮಾಡಿಕೊಟ್ಟರು. ಅವರ ಬದಲಿಗೆ ಪರ್ಯಾಯವಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಪ್ರತಿ ತಿಂಗಳು ಸುಮಾರು 10 ಕೋಟಿ ರೂಪಾಯಿ ಅಂದರೆ ಒಟ್ಟು 100 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾಡುವ ವ್ಯವಸ್ಥೆಯನ್ನು ನಾವು ನಿರ್ಮಾಣ ಮಾಡಿದೆವು. ಹೀಗೆ ಅವರ ಸಮಸ್ಯೆಯನ್ನೂ ನಾವು ಬಗೆಹರಿಸಿದ್ದೇವೆ. ಜೊತೆಗೆ, ಬಹಳ ಪ್ರಮುಖವಾಗಿರುವಂಥಾದ್ದು ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಸುಮಾರು 300 ರಿಂದ 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಹೊಸ ಯೋಜನೆಯನ್ನು ಅಂದರೆ 'ಕ್ಷೀರಭಾಗ್ಯ' ಯೋಜನೆಯನ್ನು ಕಳೆದ ವರ್ಷ ಆಗಸ್ಟ್ ಒಂದನೇ ತಾರೀಖಿನಿಂದ ಪ್ರಾರಂಭ ಮಾಡಿದರು. ಈ ಯೋಜನೆಯಿಂದ ಸುಮಾರು 67 ಲಕ್ಷ ವಿದ್ಯಾರ್ಥಿಗಳಿಗೆ ಹಾಲನ್ನು ಕೊಡುವಂಥ ಕೆಲಸವನ್ನು ಮಾಡಿದರು. ಅದರಿಂದ ಈ ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಿಗೆ ಹೋಗುವ ಎಲ್ಲ ಮಕ್ಕಳಿಗೆ ಪೌಷ್ಟಿಕಾಂಶವನ್ನೂ ಕೊಡಲಾಗಿದೆ. ಇದರಿಂದ ಆ ಮಕ್ಕಳ ಆರೋಗ್ಯ ಸುಧಾರಣೆಯಾಗಿದೆ ಎನ್ನುವುದು ಅಧಿಕೃತವಾಗಿಯೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ವರದಿ ಬಂದಿದೆ. ಹಾಲು ಕೊಡಲು

ಶುರು ಮಾಡಿದ ಮೇಲೆ ನಮ್ಮ ಶಾಲೆಗೆ ಬರುವಂಥ ಮಕ್ಕಳ ಸಂಖ್ಯೆಯೂ ಜಾಸ್ತಿಯಾಗಿದೆ ಮತ್ತು ಅವರ ಆರೋಗ್ಯವೂ ಕೂಡ ಉತ್ತಮವಾಗಿದೆ. ಇವೆಲ್ಲವೂ ನಾವು ಮಾಡಿರುವಂಥ ಸಾಧನೆಗಳು. ಕಳೆದ ಅನೇಕ ವರ್ಷಗಳಿಂದ ಅಂದರೆ ಸುಮಾರು ಇಪ್ಪತ್ತು ವರ್ಷಗಳಿಂದ ನಮ್ಮ ಪ್ರೈಮರಿ ಸ್ಕೂಲ್ ಟೀಚರ್‌ಗಳಿಗೆ ಪ್ರಮೋಷನ್ ಎನ್ನುವುದೇ ಇರಲಿಲ್ಲ. ಅನೇಕ ಕಡೆಗಳಲ್ಲಿ ನಾನು ಶಾಲೆಗೆ ಭೇಟಿ ಕೊಟ್ಟಾಗ ನೋಡಿದಂತೆ, ಅವರು 20–30 ವರ್ಷಗಳಿಂದ ಸೇವೆ ಸಲ್ಲಿಸಿದ್ದರೂ ಅವರು ಹೆಡ್ ಮಾಸ್ಟರ್ ಆಗುವುದೇ ಇಲ್ಲ ಎನ್ನುವ ಪರಿಸ್ಥಿತಿ ಇತ್ತು. ಅವರು ಟೀಚರ್ ಆಗಿಯೇ ರಿಟೈರ್ ಆಗಬೇಕು ಎನ್ನುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಟ್ಟಿದ್ದರು. ಏನೆಂದರೆ, 120 ವಿದ್ಯಾರ್ಥಿಗಳು ಇಲ್ಲದ ಶಾಲೆಗಳಿಗೆ ಹೆಡ್ ಮಾಸ್ಟರ್‌ಅನ್ನು ಕೊಡಬಾರದು ಎನ್ನುವ ನಿಯಮವನ್ನು ತಂದಿದ್ದರು. ನಾವು ಅದನ್ನು ತೆಗೆದು, 8,000 ಜನ ಟೀಚರ್ಸ್‌ಗೆ ಹೆಡ್ ಮಾಸ್ಟರ್ ಆಗುವಂಥ ಅವಕಾಶವನ್ನು ಮಾಡಿಕೊಡುವಂಥ ಒಂದು ಪ್ರಯತ್ನವನ್ನು ಮಾಡಿದ್ದೇವೆ. ಅದರಿಂದ ಶಾಲೆಗಳಿಗೂ ಒಳ್ಳೆಯದಾಗುತ್ತದೆ. ಏಕೆಂದರೆ, ಯಾವ ಶಾಲೆಗೆ ಹೋದರೂ ಹೆಡ್ ಮಾಸ್ಟರ ಇಲ್ಲ ಎನ್ನುವ ಪರಿಸ್ಥಿತಿ ಇತ್ತು. ಯಾರನ್ನೂ ಕೇಳಿದರೂ in-chargeನಲ್ಲಿದ್ದೇವೆ ಎಂದು ಹೇಳುತ್ತಿದ್ದರು. ಈ ಪದ್ಧತಿಯನ್ನು ನಿರ್ಮಾಣ ಮಾಡಬೇಕೆನ್ನುವ ದೃಷ್ಟಿಯಿಂದ ಒಂದು ಹೆಜ್ಜೆಯನ್ನಿಟ್ಟು ಸುಮಾರು 8 ಸಾವಿರ Primary teachers ಇದ್ದರು, ಅವರಿಗೆ Headmaster promotion ಕೊಡತಕ್ಕಂಥ ಜವಾಬ್ದಾರಿಯನ್ನು ಕೊಡತಕ್ಕಂಥ, ಆಡಳಿತದಲ್ಲೂ ಕೂಡ ಅದನ್ನು ಉತ್ತಮವಾಗತಕ್ಕಂಥ ರೀತಿಯಲ್ಲಿ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಇನ್ನೊಂದು ಬಹಳ ಪ್ರಮುಖವಾಗಿರುವಂಥದ್ದು, ಕಳೆದ ಬಾರಿ ನಾನು ಶಾಸಕನಾಗಿದ್ದಾಗ ಸದನದಲ್ಲಿ ಅನೇಕ ಸಾರಿ ನಾವು ಪ್ರತಿಭಟನೆ ಮಾಡಿದ್ದೇವೆ. ನನ್ನ ಒಂದು ಕ್ಷೇತ್ರದಲ್ಲಿಯೇ ಸುಮಾರು 25 ಜನ teachers ಇರಲಿಲ್ಲ. Vacancy ಇತ್ತು. ಆದರೆ, 5 ವರ್ಷ ಕೂಡ ನಮಗೆ Guest Teahers ಸಿಕ್ಕಿಲ್ಲ, ಅಧಿಕೃತವಾಗಿ ಯಾವ teachers ಸಹ ಸಿಕ್ಕಿಲ್ಲ. ನಾವೆಲ್ಲರೂ ಶಾಸಕರಾದ ಕಳೆದ ಅವಧಿಯಲ್ಲಿ teachers ಹಾಕದೇ ಇರುವುದಕ್ಕೆ ನಮ್ಮ ಶಾಸಕರೇ ಕಾರಣ ಎನ್ನುವ ರೀತಿಯಲ್ಲಿ ಇವರೇನಪ್ಪ ಇವರು ಕೆಲಸವೇ

ಮಾಡುವುದಿಲ್ಲವೆನ್ನುವ ಒಂದು ಭಾವನೆ ಬಂದಿತ್ತು. ಪ್ರತಿ ಸಾರಿಯೂ ಊರಿಗೆ ಹೋದಾಗ ನಮಗೆ ಟೀಚರ್ಸ್ ಇಲ್ಲವೆಂದು ಅವರು strike ಮಾಡುತ್ತಿದ್ದರು. ಅದನ್ನು ಮನಗಂಡು ಸುಮಾರು 28 ಸಾವಿರ teachers ಕೊರತೆ ಏನಿತ್ತು, ಅದರ ಬದಲಿಗೆ ನಾನು ಆರ್ಥಿಕ ಇಲಾಖೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳಿಕೊಂಡಾಗ ಅರ್ಧದಷ್ಟು teachers ಅನ್ನು ಅತಿಥಿ ಶಿಕ್ಷಕರನ್ನು ತತಕ್ಷಣದಲ್ಲಿ ನೇಮಕ ಮಾಡುವುದಕ್ಕೆ ಅನುಮೋದನೆ ಮಾಡಿದರು. ಅದರ ಜೊತೆ ಇನ್ನೂ ಒಂದು ಪ್ರಮುಖವಾಗಿರತಕ್ಕಂಥದ್ದನ್ನು ಅದು ಜೂನ್ 1ನೇ ತಾರೀಖಿನಿಂದ ಮಾರ್ಚ್ 31ರ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಯಾವ teachers retire ಆಗುತ್ತಾರೆ ಅವರ service ಅನ್ನು ಶೈಕ್ಷಣಿಕ ಅವಧಿಯ ಅಂತ್ಯದವರೆಗೆ ಮುಂದುವರಿಸಬೇಕೆನ್ನುವ ಒಂದು ಮನವಿ, ಪ್ರಸ್ತಾವನೆಯನ್ನು ನಾನು ಸಲ್ಲಿಸಿದ್ದೆ. ಅದಕ್ಕೂ ಕೂಡ ಅವರು ಒಪ್ಪಿಗೆ ಕೊಟ್ಟರು. ಅದರ ಮೂಲಕ ಸುಮಾರು ನೂರಾರು ಕೋಟಿ ರೂ.ಗಳ ವೆಚ್ಚ ಸರ್ಕಾರಕ್ಕೆ ಬಂದಿದೆ. ಆದರೆ ಅರ್ಧದಷ್ಟು ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಅನೇಕ ಜನ ಸದಸ್ಯರು ಮಾತನಾಡತಕ್ಕಂಥ ಸಂದರ್ಭದಲ್ಲಿ teachers ಕೊರತೆ ಇದೆ, teachers ಇಲ್ಲ, teachers ಇದ್ದಾರೆ, ಆದರೆ ಅಲ್ಲಿ ಮಕ್ಕಳು ಕಡಿಮೆ ಇದ್ದಾರೆ, ಈ ರೀತಿಯಾದ ಸಮಸ್ಯೆಗಳನ್ನು ಹೇಳಿದರು. ಇದರ ಪರಿಹಾರಕ್ಕಾಗಿ ಖಂಡಿತವಾಗಿ ಈ ಕೆಲಸವನ್ನು ಮಾಡಿದ್ದೇವೆ. ಆದರೆ, ಪ್ರತಿ ವರ್ಷ ನಮ್ಮ ಇಲಾಖೆಯಲ್ಲಿ 3 ರಿಂದ 4 ಸಾವಿರ teachers retire ಆಗುತ್ತಾರೆ ಎನ್ನುವುದೂ ಕೂಡ ನಮ್ಮ ಗಮನದಲ್ಲಿದೆ. ಇದನ್ನು ಭರ್ತಿ ಮಾಡಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಒಂದು ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆ. ಆಗಲೇ 11,400 ಜನ teachers ಅನ್ನು appoint ಮಾಡಿಕೊಳ್ಳುವುದಕ್ಕೆ ಆರ್ಥಿಕ ಇಲಾಖೆ ಒಪ್ಪಿಗೆ ಕೊಟ್ಟಿದೆ. ಇನ್ನೂ 5 ಸಾವಿರ ಜನ teachers ಅನ್ನು ನೀವು ನೇಮಕ ಮಾಡಿಕೊಳ್ಳಿ, ಅದಕ್ಕೆ ಒಪ್ಪಿಗೆ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ಸುಮಾರು 16,777 ಜನ teachers ಅನ್ನು ಮುಂದಿನ ಅಕ್ಟೋಬರ್, ನವೆಂಬರ್ ವೇಳೆಗೆ appointment ಅನ್ನು ಮಾಡುತ್ತೇವೆ. ಆ ಸಂದರ್ಭದಲ್ಲಿ ಬಹುಶಃ ಅರ್ಧದಷ್ಟು ಸಮಸ್ಯೆಯನ್ನು ನಾವು ಬಗೆಹರಿಸಬಹುದು. ಈಗಾಗಲೇ

ಆ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ವಿಳಂಬವಾಗುವುದಕ್ಕೆ ಹೈದರಾಬಾದ್ ಕರ್ನಾಟಕದ 371(ಜೆ) ಏನಿದೆ ಅದರಲ್ಲಿ ಸ್ವಲ್ಪ ಗೊಂದಲ ಇರುವುದರಿಂದ ನಮಗೆ ತ್ವರಿತವಾಗಿ ಅದನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಆ ನಿಟ್ಟಿನಲ್ಲಿಯೂ ಕೂಡ ಒಂದು ರೀತಿಯ ಯಶಸ್ಸನ್ನು ನಾವು ಸಾಧಿಸಿದ್ದೇವೆ. ಇದರ ಜೊತೆಗೆ ಹೆಣ್ಣುಮಕ್ಕಳನ್ನು ಜಾಸ್ತಿ ಶಾಲೆಗೆ ಬರುವ ಹಾಗೆ ಮಾಡಬೇಕೆನ್ನುವಂಥ ಒಂದು ಯೋಜನೆಯನ್ನು ತಂದೆವು. ಅದಕ್ಕೂ ಕೂಡ ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಗೆ ಕೊಟ್ಟು ಯಾವ ಹೆಣ್ಣುಮಗು ಶಾಲೆಗೆ 1ನೇ ತರಗತಿಗೆ enter ಆಗುತ್ತದೆ, attendance ಆಧಾರದ ಮೇಲೆ ಅವಳಿಗೆ 2 ರೂ. ಕೊಡತಕ್ಕಂಥದ್ದು, ಅವಳ account ಗೆ ಜಮಾ ಆಗತಕ್ಕಂಥದ್ದು, ಅದಕ್ಕೂ ಕೂಡ ಸುಮಾರು 7 ರಿಂದ 8 ಕೋಟಿ ಹಣ ಪ್ರತಿವರ್ಷ ಬಿಡುಗಡೆ ಮಾಡುವ ವ್ಯವಸ್ಥೆಯಾಗಿದೆ. ಕಳೆದ ಸಾರಿ ಯಾವಾಗ ನಿರ್ಧಾರ ತೆಗೆದುಕೊಂಡೆವೋ ಅಲ್ಲಿಂದ ಇದನ್ನು ನಾವು ಬಿಡುಗಡೆ ಮಾಡಿದ್ದೇವೆ. ಈಗ ಅದು ಎಂದಿನಂತೆ regular ಆಗಿ ನಡೆಯುತ್ತಿದೆ. ಅದೂ ಕೂಡ ನಮ್ಮ ಸರ್ಕಾರದ ವತಿಯಿಂದ ಮಾಡಿರತಕ್ಕಂಥ ಶಿಕ್ಷಣವನ್ನು ಉತ್ತಮಪಡಿಸುವುದಕ್ಕೆ ಮತ್ತು ಪ್ರೋತ್ಸಾಹ ಕೊಡುವುದಕ್ಕೆ ಉತ್ತಮವಾದಂಥ ಒಂದು ಕಾರ್ಯವನ್ನು ಮಾಡಿದ್ದೇವೆ. ನಾವು ಪುಸ್ತಕಗಳನ್ನು uniform ಅನ್ನು ಕೊಟ್ಟಿದ್ದೇವೆ, ಕಳೆದ ಸಾರಿ ನಾವು ಹೇಳಿದಾಗ ಅನೇಕ ಜನ ಪತ್ರಿಕೆಯಲ್ಲಿ, ವಾಚಕರ ವಾಣಿಯಲ್ಲಿ ಮತ್ತು ಸಾರ್ವಜನಿಕವಾಗಿ ವ್ಯಕ್ತವಾಗಿತ್ತು. ನಾವು ಬಳಸತಕ್ಕಂಥ paper ಅದು ಗುಣಮಟ್ಟದಲ್ಲಿ ಉತ್ತಮವಿಲ್ಲ. ಈ ಕಡೆಯದು ನೋಡಿದರೆ ಆ ಕಡೆಯದೂ ಕಾಣುತ್ತದೆ. ಉತ್ತಮವಾಗಿ ಮಾಡಬೇಕೆಂದು ಇತ್ತು. ಅದನ್ನೂ ಕೂಡ ಏನು 60 GSM ಬಳಕೆ ಮಾಡುತ್ತಿದ್ದ paper ಅನ್ನು 70 GSM ಮಾಡಿ ಸುಮಾರು 7 ರಿಂದ 8 ಕೋಟಿ ರೂ. ಗೂ ಹೆಚ್ಚು ಹೊರೆ ಸರ್ಕಾರಕ್ಕೆ ಬಂದಿದೆ. ಅದನ್ನೂ ಕೂಡ ಮಾಡಿದ್ದೇವೆ. ಈ ವರ್ಷದ ಪುಸ್ತಕ ಮತ್ತು ಕಳೆದ ವರ್ಷದ ಪುಸ್ತಕವನ್ನು ತೆಗೆದು ನೋಡಿದರೆ ಖಂಡಿವಾಗಿಯೂ ಕೂಡ ಅದರಲ್ಲಿ difference ಕಾಣುತ್ತದೆ. ಅದರ ಚಿತ್ರಗಳು ಆಗಬಹುದು, paper ಆಗಬಹುದು ಅಥವಾ printing material ಆಗಬಹುದು. That we have changed. ಈ ವರ್ಷದಲ್ಲಿ ನಮಗೆ ಸಮಸ್ಯೆ ಆಗಿರುವಂಥದ್ದು ಸದಸ್ಯರು ಯಾರೂ ಅದನ್ನು

ಪ್ರಸ್ತಾಪ ಮಾಡಲಿಲ್ಲ. ಆದರೆ, ನಾನು ಸ್ವ ಇಚ್ಛೆಯಿಂದ ಹೇಳುತ್ತಿದ್ದೇನೆ. Second PUC and First PUC ನಲ್ಲಿ ಸ್ವಲ್ಪ ಸಮಸ್ಯೆ ಉಂಟಾಗಿತ್ತು. ಅದಕ್ಕೆ ಕಾರಣವೇನೆಂದರೆ, actually ಅದನ್ನು ನಾವು print ಮಾಡುವುದಲ್ಲ. ಈ ಸಾರಿ ಹೊಸ syllabus ಬಂದಿದೆ. ಅದು SSLC ಯಲ್ಲೂ ಬಂದಿದೆ, PUC ನಲ್ಲೂ ಸುಮಾರು *147 titles* change ಆಗಿದೆ. ಇವತ್ತು PUC ಯಲ್ಲೂ ಕೂಡ ಅಷ್ಟೇ. ಇಲ್ಲಿ ಬಹಳಷ್ಟು ಸಮಸ್ಯೆಗಳು ಏನೆಂದರೆ, ಅದರ ವ್ಯವಸ್ಥೆಗಳ ಬಗ್ಗೆ ಕೆಲವು ಗೊಂದಲಗಳಿವೆ, ಕೆಲವರಿಗೆ ಮಾಹಿತಿ ಇಲ್ಲ. PUC ನಲ್ಲಿ ಹಿಂದೆ ಏನು ವ್ಯವಸ್ಥೆ ಇತ್ತೆಂದರೆ, PUC ಯಲ್ಲಿ ಯಾವುದು ಒಳ್ಳೆಯ ಪುಸ್ತಕವೋ ಆ ಪುಸ್ತಕವನ್ನು ತೆಗೆದುಕೊಂಡು text ಆಗಿ ಬಳಸಿಕೊಂಡು ವಿದ್ಯಾರ್ಥಿಗಳು ಬಳಸಿಕೊಳ್ಳಬಹುದಾಗಿತ್ತು. ಅದರಿಂದ ಬಹಳಷ್ಟು ಗೊಂದಲಗಳು ಬಂದವು. ಏಕೆಂದರೆ, ನಾನಾ ರೀತಿಯ authors ಇರುತ್ತಾರೆ. ಅದನ್ನು ತೆಗೆದರೆ ಆ question ಬಂದಿರುವುದಿಲ್ಲ, ಇದನ್ನು ತೆಗೆದರೆ ಈ question ಬಂದಿರುವುದಿಲ್ಲ, ಈ ರೀತಿಯ ಗೊಂದಲಗಳಾಗಿವೆ ಎನ್ನುವುದರ ಬಗ್ಗೆ ಸರ್ಕಾರ ಗಮನ ಕೊಟ್ಟು ಅದಕ್ಕೆ ಸರ್ಕಾರದ ವತಿಯಿಂದಲೇ ಇಂಥ syllabus ಅನ್ನು ನಾವು title ಮಾಡಿದ್ದೇವೆ. ಬೇರೆಯದನ್ನು ಅವರು refer ಮಾಡಲಿ. But, ಸರ್ಕಾರದ ವತಿಯಿಂದ ಒಂದು ಪುಸ್ತಕವನ್ನು ಹೊರಡಿಸಬೇಕೆನ್ನತಕ್ಕಂಥ ಒಂದು ಮಾನದಂಡವನ್ನು ಮಾಡಿ ಆ ಮಾನದಂಡದೊಳಗೆ ನಮ್ಮ syllabus ಏನಿರಬೇಕೆನ್ನುವುದನ್ನು ಅಳವಡಿಸಿ, ನಾವು ಪುಸ್ತಕವನ್ನು print ಮಾಡುವುದಿಲ್ಲ. Tender ಕರೆದು ಬೇರೆಯವರಿಗೆ ಕೊಡುತ್ತೇವೆ. We will collect only the royalty. ಆ ರೀತಿ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಈ ವರ್ಷದ ಗೊಂದಲ ಏನಾಯಿತು ಎಂದರೆ, ಕಳೆದ ವರ್ಷ print ಮಾಡಿದವರು ಜಾಸ್ತಿ ಪುಸ್ತಕ ಇಟ್ಟುಕೊಂಡಿದ್ದರು. ಈ ವರ್ಷ print ಮಾಡಿದವರು ಅದರಿಂದ ನಷ್ಟವಾಗುತ್ತದೆಂದು ಹೇಳಿ High Court ಗೆ ಹೋಗಿದ್ದರಿಂದ ಸ್ವಲ್ಪ ಗೊಂದಲಗಳಾಗಿ ಒಂದು ತಿಂಗಳಿಂದ ಈ ವ್ಯಾಜ್ಯ ನಡೆಯುತ್ತಿದೆ. ಆದ್ದರಿಂದ ಸ್ವಲ್ಪ ವಿಳಂಬವಾಯಿತು. ಅದರೊಳಗೂ ನಾವು ಯಶಸ್ಸನ್ನು ಸಾಧಿಸಿದ್ದೇವೆ. ಇನ್ನು ಐದಾರು title ಬಿಟ್ಟುಬಿಟ್ಟರೆ ಬಹುಭಾಗ ಅದನ್ನು ಬಗೆಹರಿಸುವಂಥ ಪ್ರಯತ್ನವನ್ನು ಮಾಡಿದ್ದೇವೆ. ಬಹಳ

ಪ್ರಮುಖವಾಗಿ ಗೌರವಾನ್ವಿತ ಸದಸ್ಯರು ICT Phase 1, 2 ಬಗ್ಗೆ ಕೆಲವರು ಮಾತನಾಡಿದರು. ಈ ಬಗೆ ಕೇಳಿದವರು ಈಗ ಸದನದಲ್ಲಿಲ್ಲ. ICT Phase 1 and 2 ಅದರೊಳಗೆ ವ್ಯತ್ಯಾಸವಿದೆ. ICT Phase – 1 ಬಹಳ ಹಿಂದೆ ಮಾಡಿರತಕ್ಕಂಥದ್ದು. Phase-2 ಕೂಡ ಹಿಂದೆ ಮಾಡಿರತಕ್ಕಂಥದ್ದು. ಆದರೆ, ICT Phase-2 ಮಾಡಿದಾಗ ಒಂದು ದೊಡ್ಡ ಸಮಸ್ಯೆ ಉದ್ಭವವಾಯಿತು. Tender ಕರೆದರು, Edu.com ಎನ್ನುವಂಥ company ಗೆ ಕೊಟ್ಟರು. ನಾವು ಬರುವುದರೊಳಗೆ ಅದು ಮುಗಿದೇ ಹೋಗಿತ್ತು. ನಾನು enter ಆಗುವಷ್ಟೊತ್ತಿಗೆ, ನಾನು charge ತೆಗೆದುಕೊಳ್ಳುವಷ್ಟೊತ್ತಿಗೆ ಅದರದ್ದು ಯಾವುದೂ ಇರಲಿಲ್ಲ. ಆದರೆ, ಸಮಸ್ಯೆ ಮಾತ್ರ ನಮ್ಮ ಜೊತೆ ಬಂತು ಅಷ್ಟೆ. ಏನು Edu.com ನವರು ಮಾಡಬೇಕಾಗಿತ್ತು? ಸರ್ಕಾರಕ್ಕೂ ಅವರಿಗೂ ವ್ಯಾಜ್ಯ ಪ್ರಾರಂಭವಾಗಿತ್ತು. ಆದ್ದರಿಂದ, ಸರ್ಕಾರದವರೇ ನಮಗೆ ಹಣ ಕೊಡಬೇಕೆಂದು ಅವರು, ನೀವು conditions ಪ್ರಕಾರವಾಗಿ ನಡೆದುಕೊಂಡಿಲ್ಲವೆಂದು ಇವರು, ಆ ಕಾರಣದಿಂದಾಗಿ ಸುಮಾರು 1 ವರ್ಷದಿಂದ equipments ಏನು ಹಾಳಾಗಿತ್ತು, ಒಂದು ಸಮಸ್ಯೆ ನಿರ್ಮಾಣವಾಯಿತು. ಅದಕ್ಕೆ ಕಾರಣ ಕೂಡ revive ಮಾಡುವುದಕ್ಕೆ ಅಂದಾಜು ಸುಮಾರು 15 ಕೋಟಿ ರೂ. ವೆಚ್ಚ ಬರಬಹುದೆನ್ನುವುದನ್ನು ನಾವು ಇಲ್ಲಿ ಪ್ರಸ್ತಾವನೆ ಸಲ್ಲಿಸಿದ್ದೇವೆ. ಈಗ ಹೊಸದಾಗಿ next ಬರತಕ್ಕಂಥ ಈ ವರ್ಷದಲ್ಲಿ ಹೆಚ್ಚುಕಡಿಮೆ ನಾವು ಸರ್ಕಾರಿ ಸ್ವಾಮ್ಯದ KEONICS ಮೂಲಕ ಸುಮಾರು 50 ಕೋಟಿ ರೂ. ವೆಚ್ಚದಲ್ಲಿ ಉಳಿದ ಎಲ್ಲ ಪ್ರೌಢಶಾಲೆಗಳು ಏನಿವೆ, ಅದೆಲ್ಲದಕ್ಕೂ ಕೂಡ ಅನುಷ್ಠಾನಗೊಳಿಸುವುದು ಎನ್ನತಕ್ಕಂಥ ಪ್ರಯತ್ನದಲ್ಲಿದ್ದೇವೆ. ICT Phase-3 ಏನಿದೆ, ಅದಕ್ಕೆ ಯೋಜನೆಯನ್ನು ತಯಾರು ಮಾಡಿದ್ದೇವೆ. ಸದ್ಯದಲ್ಲಿಯೇ ಅದನ್ನು introduce ಮಾಡತಕ್ಕಂಥ ಪ್ರಯತ್ನ ಮಾಡುತ್ತೇವೆ. ಹಿಂದೆ ಏನು ನಡೆದಿತ್ತು, ಅದರೊಳಗೆ ಅವವರ agreement ಅನ್ನು cancel ಮಾಡಿ ಅವರಿಗೆ ಕೊಟ್ಟಿರತಕ್ಕಂಥ 5 ಕೋಟಿ EMD ಹಣ ಏನಿತ್ತು ಅದನ್ನೂ ಕೂಡ confiscate ಮಾಡಿ ಆಗಿದೆ. ಅವರು ಏನು apparatus ಸರಿಯಿಲ್ಲ ಎನ್ನುತ್ತಾರೆ, actually we have cancelled the programme. Cancel ಎಂದರೆ agreement ಅನ್ನು ಅವರ ಜೊತೆಯ

ಹೊಂದಾಣಿಕೆಯನ್ನು ನಾವು ರದ್ದು ಮಾಡಿಕೊಂಡಿದ್ದೇವೆ. ಅವರು ಕೊಟ್ಟಿರತಕ್ಕಂಥ EMD ಯನ್ನೂ Confiscate ಮಾಡಿಕೊಂಡಿದ್ದೇವೆ. ಆದ್ದರಿಂದ ಬೇರೆ ರೀತಿಯ ಆರ್ಥಿಕ ವ್ಯವಸ್ಥೆಯನ್ನು ಮಾಡಿ ಅದನ್ನೂ revive ಮಾಡುವುದಕ್ಕೆ ಹೊಸದಾಗಿ ನಾವೇನು intoduce ಮಾಡುತ್ತಿದ್ದೇವೆ ಅದನ್ನೂ ಮಾಡಬೇಕೆನ್ನುವಂಥ ನಮ್ಮ ಪ್ರಯತ್ನ ಇದೆ. ಹಾಗೆಯೇ ಹಿಂದಿನ ಸಚಿವರಾಗಿದ್ದಂಥ ಕಾಗೇರಿಯವರು ಭಾಷಾ ನೀತಿ ಬಗ್ಗೆ ಮಾಡನಾತಿದರು, ಹಾಗೆಯೇ minority status ಬಗ್ಗೆ ಮಾತನಾಡಿದರು. ಭಾಷಾ ನೀತಿ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಹೇಳಿದರು. ಅವರಿಗೆ ಅದರ ಬಗ್ಗೆ ಏನು ಮಾಹಿತಿ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ನಾವು Supreme Court ನಲ್ಲಿ argument ಗೆ ಬರುವುದಕ್ಕಿಂತ ಮುಂಚಿತವಾಗಿಯೇ ನಾನೇ ನನ್ನ ಅಧ್ಯಕ್ಷತೆಯಲ್ಲಿ ಎರಡು ಸಭೆಗಳನ್ನು ಕರೆದಿದ್ದೇನೆ. ಈ ನಾಡಿನ ಖ್ಯಾತ ಸಾಹಿತಿಗಳು, ಕನ್ನಡ ಪ್ರಾಧಿಕಾರದ ಅಧ್ಯಕ್ಷರು, ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಅವರೆಲ್ಲರನ್ನೂ ಕರೆದು ಎರಡೆರಡು ಸಾರಿ ಮತ್ತು ಗೌರವಾನ್ವಿತ Advocate General ರವರೂ ಕೂಡ ಅದರೊಳಗೆ ಭಾಗವಹಿಸಿದ್ದರು. ಪೂರ್ಣವಾಗಿ ನಾವು ಏನೇನು ಕ್ರಮ ತೆಗೆದುಕೊಳ್ಳಬೇಕು, ಏನೇನು ಮಾಡಬೇಕು, ಏನೇನು ಮಾಡಬೇಕಾಗುತ್ತದೆ ಎನ್ನುವುದನ್ನೂ ಕೂಡ ನಾವು ಚರ್ಚೆ ಮಾಡಿ ಮತ್ತು ನಮ್ಮ Advocate General ಏನಿದ್ದಾರೆ, ಅವರು ಹೇಳಿದ ರೀತಿಯಲ್ಲಿ ಇವರು ಬೇರೆಯವರನ್ನು ತೆಗೆದುಕೊಳ್ಳಬಹುದಾಗಿತ್ತು, ಆ ರೀತಿ ಏನಲ್ಲ. ಖಂಡಿತವಾಗಿಯೂ ಅವರು ಸಮರ್ಥವಾಗಿ ವಾದವನ್ನು ಮಂಡಿಸಿದ್ದಾರೆ. ಜೊತೆಗೆ ಅವರಿಗೆ ಏನು ಅನುಮಾನವಿದೆ ಎನ್ನುವುದು ನನಗೆ ಗೊತ್ತಾಗಿಲ್ಲ. ಏಕೆಂದರೆ, ನಾನೂ ಒಬ್ಬ Advocte ಆಗಿ practice ಮಾಡಿದವನು. ನನಗೆ ಅದರ ಅನುಭವವಿದೆ. ಏನು ಹೇಳಬೇಕಾಗಿತ್ತು, ಶ್ರೇಷ್ಠ ನ್ಯಾಯಾಲಯಕ್ಕೆ ಏನು ಸಲ್ಲಿಸಬೇಕಾಗಿತ್ತು, ವಾದ, oral argument ಮಾತ್ರವಲ್ಲ, ವಾದ ಮಂಡಿಸಿದ್ದಾರೆ.

ಶ್ರೀ ಬಿ.ನಾರಾಯಣಗೌಡ:– Prejudice mind ನಿಂದ ಹೇಳಿದ್ದಾರೆ.

ಶ್ರೀ ಕಿಮ್ಮನೆ ರತ್ನಾಕರ್:- ಅದನ್ನು ಹೇಳುತ್ತೇನೆ. ವಾದವನ್ನು ಅತ್ಯಂತ ಸಮರ್ಥವಾಗಿ ಮಂಡಿಸಿದ್ದಾರೆ. Written Argument has been filed before the Supreme Court. ಅವರು ಏನೇನು ಹೇಳಬೇಕೆಂದಿದ್ದರು, ಏನೇನು refer ಮಾಡಬೇಕೆಂದಿದ್ದರು ಅದೆಲ್ಲವನ್ನೂ ಕೂಡ ಸಮರ್ಥವಾಗಿ written argument ನಲ್ಲೂ ಸಹ ಅದನ್ನು ಮಂಡಿಸಿದ್ದಾರೆ. ಏಕೆಂದರೆ ಇಂಥವರಿಗೆಲ್ಲ ಉತ್ತರ ಕೊಡಬೇಕೆನ್ನುವ ಕಾರಣಕ್ಕಾಗಿಯೇ ಅದನ್ನು written argument ಗೆ ಹೇಳಿದ್ದು. ಅವರ ಹತ್ತಿರ ನಾನು ಮಾತನಾಡಿದ್ದೇನೆ. He is capable, able ಈಗ Supreme Court ಯಾವ ಕಾರಣಕ್ಕೆ, ಏನು ನಿರ್ಣಯ ತೆಗೆದುಕೊಂಡಿದೆ? Sureme Court Judgment ನ ಬಗ್ಗೆ ನಾನು ಹೇಳುತ್ತೇನೆ, ಎರಡು ಕಡೆ there is a confusion. Supreme Court ನ ನಮ್ಮ Constitution provision ನಲ್ಲೇ ನಮ್ಮ State ಗೆ independent rights ಇದೆ ಎನ್ನುವುದಿದೆ. ಆ provision ಅನ್ನು ಅದರೊಳಗೆ ಹಾಕಿದ್ದಾರೆ. The speaking order,,, he is against to that provision. Review Petition ಗೆ ಬೇರೆಯವರು appoint ಮಾಡಿ ಎಂದು ಹೇಳಿದರು. ಅವರಿಗೆ ಯಾವ ರೀತಿ ಹೇಳಿದರೋ ನನಗೆ ಗೊತ್ತಿಲ್ಲ. Review Petition ನಲ್ಲಿ ಆ ರೀತಿ ಅಲ್ಲ. ಇದು Constitution Bench ಮೇಲೆ argument ಆಗಿರತಕ್ಕಂಥದ್ದು. ಇದರೊಳಗೆ Review Petition ಎಂದು ಹೇಳಿದರೆ, it is not an open argument before the Supreme Court. It is only in Chamber ನಲ್ಲಿ ಕೇಳತಕ್ಕಂಥದ್ದು, ಚರ್ಚೆ ಮಾಡಿ, decide ಮಾಡತಕ್ಕಂಥದ್ದು. Chamber ನಲ್ಲಿ ಇಬ್ಬರನ್ನೂ ಕರೆಯುತ್ತಾರೆ, ಅಭಿಪ್ರಾಯವನ್ನು ಕೇಳುತ್ತಾರೆ. There ends the matter. ಅದಕ್ಕೆ ಅದರಿಂದ ಏನು Constitution ನ ವಿಚಾರ ನಾವು Supreme Court ನಲ್ಲೇನು argument ಮಾಡಬೇಕಾಗಿತ್ತು, that has been done properly. ನಾನಂತೂ ನಮ್ಮ Advocate ಏನಿದ್ದಾರೆ, ಅವರನ್ನು appreciate ಮಾಡುತ್ತೇನೆ. ಕಾಗೇರಿಯವರಿಗೇನಾದರೂ doubts ಇದ್ದರೆ, I am ready to supply the written argument advanced by our High Court Advocate. Where he has left lapses ಎನ್ನುವುದನ್ನು ಅವರು ಹೇಳಬೇಕಾಗುತ್ತದೆ. ಆನಂತರ ಬೇಕಾದರೆ ಅದರ ಬಗ್ಗೆ ಚರ್ಚೆ ಮಾಡಬಹುದು. ಮತ್ತೆ,

Minority Status ಬಗ್ಗೆ, ಇದರ ಬಗ್ಗೆ ಹೇಳತಕ್ಕಂಥ ಸಂದರ್ಭದಲ್ಲಿ ಗೌರವಾನ್ವಿತ ಸದಸ್ಯರಾಗಿತಕ್ಕಂಥ ಒಬ್ಬರು ನನಗೆ refer ಮಾಡಿದರು. ಕೋನರೆಡ್ಡಿಯವರು ಎಂದು ಕಾಣಿಸುತ್ತದೆ. ನೀವು ಪ್ರಸ್ತಾಪ ಮಾಡಿದಿರಿ. ಯಾವುದೆಂದರೆ, ನಮ್ಮ ದೇವನೂರು ಮಹಾದೇವರ ಎದಗೆ ಬಿದ್ದ ಅಕ್ಷರದ ಬಗ್ಗೆ ಮಾಡಿದರು. ಏಕೆಂದರೆ, ಈ ಸಂದರ್ಭದಲ್ಲಿ ಆ ಮಾತು ಏಕೆ ಹೇಳುತ್ತೇನೆಂದರೆ, ಇವೆಲ್ಲವೂ ಕೂಡ ಅವಕ್ಕೆ linked ಎಂದು ನಾನು ಅಂದುಕೊಳ್ಳುತ್ತೇನೆ. ಏಕೆಂದರೆ, ದೇವನೂರು ಮಹಾದೇವರ ಎದೆಗೆ ಬಿದ್ದ ಅಕ್ಷರವನ್ನು ನಾನು 10 ಸಾರಿ ಓದಿದ್ದೇನೆ. ಈಗಲೂ ಪ್ರತಿನಿತ್ಯ ಓದುತ್ತೇನೆ. ಶಿಕ್ಷಣಕ್ಕೆ ಬಹಳ ಮುಖ್ಯವಾಗಿರತಕ್ಕಂಥದ್ದು. ಎದೆಗೆ ಬಿದ್ದ ಅಕ್ಷರ ಎನ್ನತಕ್ಕಂಥ ಒಂದು ಮಧ್ಯದಲ್ಲಿ ಬರತಕ್ಕಂಥ ಎಳೆ ಇದೆ. ಏಕೆಂದರೆ, ನನಗೇನಾದರೂ ಈ ಅಕ್ಷರ ನನ್ನ ಎದೆಗೆ ಬೀಳದೇ ಇದ್ದರೆ ನಾನೇನಾಗಿರುತ್ತಿದ್ದೆ ಎನ್ನತಕ್ಕಂಥ ಮಾತನ್ನು ಅದರೊಳಗೆ ಹೇಳುತ್ತಾರೆ. ಅದರೊಳಗೆ ಮುಂದುವರಿದ ಜಾತಿಯವರು, ಮೇಲ್ವರ್ಗದ ಜನ, ನಮ್ಮ ಸಮಾಜದಲ್ಲಿರುವವರು ದಲಿತರು ಮತ್ತು ಹಿಂದುಳಿದವರ ಬಗ್ಗೆ ನಾವು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದಕ್ಕೆ ತೀರ್ಮಾನ ತೆಗೆದುಕೊಳ್ಳಬೇಕು ಮತ್ತು ಅದಕ್ಕೆ ಪೂರಕವಾಗಿ ಇರಬೇಕೆನ್ನತಕ್ಕಂಥದ್ದನ್ನೂ ಕೂಡ ಈ ಸಂದರ್ಭದಲ್ಲಿ ಯೋಚನೆ ಮಾಡಬೇಕು. ಏಕೆಂದರೆ, ಈ ಮಾತನ್ನು ಬಹುಶಃ ಯಾವ ಕಾರಣಕ್ಕಾಗಿ ಹೇಳುತ್ತಿದ್ದೇನೆ ಎಂದು ತಮಗೆ ಅರ್ಥವಾಗಿದೆ ಎಂದು ನಾನು ಅಂದುಕೊಳ್ಳುತ್ತೇನೆ. ಏಕೆಂದರೆ, ನಾನೂ ಕೂಡ ತರೀಕೆರೆಗೆ ಹೋಗಿದ್ದೆ. ಶ್ರೀನಿವಾಸ್‌ರವರು ಇಲ್ಲ. ಸಂವಾದದಲ್ಲಿ ಒಂದು ಹೆಣ್ಣು ಮಗು ನನಗೊಂದು ಪ್ರಶ್ನೆ ಕೇಳಿತು. ಸಾರ್, SC/ST ಗೆ highest marks ಬರುತ್ತದೆ, ನಮಗೆ ಅವಕಾಶ ಸಿಗುವುದಿಲ್ಲ, ನೀವು ಅದನ್ನು ರದ್ದು ಮಾಡಬೇಕು, General Category ಗೆ ತರಬೇಕು ಎಂದು 8ನೇ Class ನ ಹೆಣ್ಣುಮಗು ನನಗೆ ಆ ಸಂವಾದದಲ್ಲಿ ಪ್ರಶ್ನೆ ಕೇಳಿತು. Merit ಇದ್ದವರಿಗೆ ಅನ್ಯಾಯವಾಗುತ್ತದೆ ಎನ್ನುವ ಮಾತು ಹೇಳಿತು. ಆ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳಿದೆ. ಅಮ್ಮಾ, ನೀನು ತುಂಬಾ ಚಿಕ್ಕವಳು, ಇದಕ್ಕೆ 5 ಸಾವಿರ ವರ್ಷಗಳ ಇತಿಹಾಸವಿದೆ, ಇದಕ್ಕೆ ನಿನಗೆ ನಾನು ಉತ್ತರ ಕೊಡುವುದಕ್ಕೆ, ನಿನಗೆ

convince ಮಾಡುವುದಕ್ಕೆ ನನಗಾಗುತ್ತದೆಂದು ನನಗೆ ಅನ್ನಿಸಿಲ್ಲ, ಆದರೆ, ಒಂದು ಮಾತು ಹೇಳುವುದಕ್ಕೆ ನಾನು ಶಕ್ತನಿದ್ದೇನೆ, ಏನು ಹೇಳಬಹುದು ಎಂದರೆ, ಅವಳಿಗೆ ನಾನೊಂದು ಮಾತನ್ನು ಹೇಳಿದೆ, ನೋಡಮ್ಮ, ಒಬ್ಬ ತಂದೆಗೆ 8 ಜನ, 9 ಜನ ಮಕ್ಕಳು ಹುಟ್ಟಿದರೆ, ಯಾವ ಮಗುವಿಗೆ ಕಾಲಿರುವುದಿಲ್ಲ ಅಥವಾ ಕಣ್ಣಿರುವುದಿಲ್ಲ, ಊನವಾಗಿರುತ್ತದೋ, ಖಾಯಂ ಕಾಯಿಲೆ ಇರುತ್ತದೋ ಆ ಮಗುವಿನ ತಂದೆ ತಾಯಿ ಆ ಮಗುವಿನ ಬಗ್ಗೆ ಎಚ್ಚರಿಕೆ ವಹಿಸುತ್ತಾರೆಯೇ ವಿನಃ ಸಬಲವಾಗಿರತಕ್ಕಂಥ ತನ್ನ ಶಕ್ತಿ ಮೇಲೆ ತಾನು ದುಡಿಯುವ ವ್ಯಕ್ತಿಗಳ ಬಗ್ಗೆ, ಮಕ್ಕಳ ಬಗ್ಗೆ, ಗಮನಹರಿಸುವುದಿಲ್ಲ. ಯಾವ ಮಗುವಿಗೆ ಊನವಿರುತ್ತದೆ, ಯಾವ ಮಗು ಕಷ್ಟದಲ್ಲಿರುತ್ತದೆ ಅದರ ಬಗ್ಗೆ ಯೋಚನೆ ಮಾಡುತ್ತಾರೆ. ಅದನ್ನು ಮಾನ್ಯ ಕಾಗೇರಿಯವರು ಅರ್ಥ ಮಾಡಿಕೊಳ್ಳಬೇಕೆಂದು ನಾನಂದುಕೊಳ್ಳುತ್ತೇನೆ. ಇವತ್ತು ಮೇಲ್ವರ್ಗದ ಜನ, ಸಮುದಾಯ ನಾವೆಲ್ಲರೂ ಕೂಡ ಯಾರು ತುಳಿತಕ್ಕೊಳಗಾಗಿದ್ದಾರೆ, ಆ ಸಮುದಾಯದ ಪರ ನಿಲ್ಲತಕ್ಕಂಥದ್ದು, ಅವರು ಕೇಳುವುದು ಹಕ್ಕು, ನಾವು ಕೊಡುವುದೂ ಕೂಡ ನಮ್ಮ ಧರ್ಮ ಎನ್ನತಕ್ಕಂಥದ್ದನ್ನು ನಾವೂ ಕೂಡ ಅದನ್ನು ಒಪ್ಪಿಕೊಳ್ಳಬೇಕು ಎನ್ನತಕ್ಕಂಥದ್ದು ಆ ನಿಟ್ಟಿನಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಮಾತನ್ನು ನಾನು ಹೇಳಿದೆ. ಈ ಭಾಷಾ ನೀತಿಯ ಬಗ್ಗೆ ಕೂಡ ನಾವು ಮಾತನಾಡಿದೆವು. Minority Status ಬಗ್ಗೆ ಕೂಡ ನಾನು ಈ ಉದಾಹರಣೆ, ಎರಡನ್ನೂ ಗಮನದಲ್ಲಿಟ್ಟುಕೊಂಡು ಹೇಳಿದೆ. ಅದನ್ನು ದೀರ್ಘವಾಗಿ ನಾನು ಹೇಳುವುದಕ್ಕೆ ತುಂಬಾ ಸಮಯವಿಲ್ಲ. ನಾನು ಹೇಳುವುದಕ್ಕೆ ಹೋಗುವುದಿಲ್ಲ. Minority Status ಅನ್ನು ಏನಕ್ಕೆ ಎಂದು? ಯಾವ ಕ್ಷೇತ್ರದಲ್ಲಿ school ಇರುತ್ತದೆ, ಅದರೊಳಗೆ 75% ಅಲ್ಪಸಂಖ್ಯಾತರೇ ಮಕ್ಕಳು ಇರಬೇಕು ಅನ್ನತಕ್ಕಂಥದ್ದನ್ನು ಆ ಕಾಯ್ದೆ ತರುವುದಕ್ಕಿಂತ ರದ್ದು ಮಾಡುವುದೇ ಒಳ್ಳೆಯದು. ಅದರಿಂದ ಈ ದೇಶದ ಯಾವ ಅಲ್ಪಸಂಖ್ಯಾತರಿಗೂ ಅನುಕೂಲವಾಗುವುದಿಲ್ಲ. 75% ಮಕ್ಕಳಿದ್ದವರಿಗೆ ನಾವು ಅದನ್ನು ಕೊಡುತ್ತೇವೆಂದು ಹೇಳುವುದರೊಳಗೆ ಅಂಥ ಕಾನೂನನ್ನು ತರದೇ ಇರುವುದು ಒಳ್ಳೆಯದು. ಆ ರೀತಿಯಾದ ಒಂದು ಕಾನೂನನ್ನು ಇವರು ತಂದಿದ್ದರು, ನಾವು ಅದನ್ನು ಕಿತ್ತು ಹಾಕುವಂಥ ಕೆಲಸವನ್ನು ಮಾಡಿದ್ದೇವೆ.

ಆದ್ದರಿಂದ, what we have done is, correct. We are ready for reviewing the matter. ಪುನರ್‌ಪರಿಶೀಲನೆ ಮಾಡುವುದಕ್ಕೆ ಇನ್ನೂ ಅವಕಾಶವಿದೆ. ಏಕೆಂದರೆ, admissions close ಆಗಿದೆ. This is for the next year. ಅಲ್ಲಿಯವರೆಗೆ ನಾವು ಚರ್ಚೆ ಮಾಡೋಣ. ಯಾವಾಗಲೂ ನಾವು open minded. ಅದರೊಳಗೇನೂ ಚರ್ಚೆ ಮಾಡಬಾರದೆಂದಿಲ್ಲ ಅಥವಾ reviw ಮಾಡಬಾರದೆಂದಿಲ್ಲ. ಅದಕ್ಕೂ ನಾವು ready ಇದ್ದೇವೆ. ಆದರೆ, ನಾವೇನು ತಂದಿದ್ದೇವೆ, ಅದರೊಳಗೆ ಸಮರ್ಥನೀಯ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಡಳಿತಾತ್ಮಕವಾಗಿ ನಮ್ಮ ಆಡಳಿತ ಪಕ್ಷದ ಸದಸ್ಯರು ಕೆಲವರು ಅದನ್ನು ಹೇಳಿದರು. ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಲಮಾಣಿಯವರು ಆಪಾದನೆ ಮಾಡಿದರು. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು, ಭ್ರಷ್ಟಾಚಾರವನ್ನು ತೆಗೆಯಲಿಕ್ಕೆ ಏನೇನು ಸಾಧ್ಯತೆಗಳಿವೆ ನಮ್ಮ ಇತಿಮಿತಿಯಲ್ಲಿ ಕಡಿಮೆ ಮಾಡುವುದಕ್ಕೆ ನನ್ನ ಇಲಾಖೆಯಲ್ಲಿ ನಾನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನನಗೆ ಗೊತ್ತಿದೆ. Centres ಯಾವುದೆಂದು ನನಗೆ ಗೊತ್ತಿದೆ. ಆಡಳಿತಾತ್ಮಕವಾಗಿ ನಮಗೆ problem create ಮಾಡತಕ್ಕಂಥ centres ಯಾವುದು? BEO Office, DDPI Office. ಬಹಳ ಪ್ರಮುಖವಾಗಿ ಮತ್ತೆ ನಮ್ಮ Secretariat ನಲ್ಲಿರತಕ್ಕಂಥ ವ್ಯವಸ್ಥೆ. ಇವು ಮೂರನ್ನು, ಇದಕ್ಕೆ ನಾವೊಂದು ತೀರ್ಮಾನ ತೆಗೆದುಕೊಂಡು ಈಗಾಗಲೇ ಯಾರೂ ಕೂಡ 3 ವರ್ಷಗಳ ಮೇಲೆ DDPI Office ನಲ್ಲಿ, 2 ವರ್ಷಗಳ ಮೇಲೆ DDPI ಅವರ Home District ನಲ್ಲಿ ಇರಬಾರದು, he should not continue as a DDPI for the 3rd year, ಅದಕ್ಕೆ enactment ತರುವುದಕ್ಕೆ ನಾನು ಎಲ್ಲಾ ತರಹದ ಸಿದ್ಧತೆಗಳನ್ನು ಮಾಡಿಕೊಂಡಿದ್ದೇನೆ. ಯಾವುದೇ ಕಾರಣಕ್ಕೂ ಕೂಡ ಒಬ್ಬ BEO he should not continue for more than 3 years in any plac and he should not act as a BEO in his home constituency. ಅದಕ್ಕೂ ನಾವು Act ತರುವುದಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಅದೇ ರೀತಿ BEO ಕಛೇರಿಯಲ್ಲಿರತಕ್ಕಂಥವರು ಅವರೆಲ್ಲರನ್ನೂ ಕೂಡ 3 ವರ್ಷಗಳ ಮೇಲೆ ಅವರ್‍ಯಾರೇ staff ಇರಬಾರದು. 3 ವರ್ಷಗಳ ಮೇಲೆ they should

be changed. BEO Office, DDPI Office ಎಲ್ಲವನ್ನೂ change ಮಾಡಬೇಕೆಂದು ಇದ್ದೇನೆ. ನಾನು ಕಾರ್ಯದರ್ಶಿಗಳಿಗೆ ಕೂಡ ಹೇಳಿದ್ದೇನೆ. ನಮ್ಮ Secretariat ನಲ್ಲಿ ಯಾರು ಎರಡು ವರ್ಷಗಳ ಮೇಲೆ ಇದ್ದರೆ ಅವರೆಲ್ಲರನ್ನೂ ತೆಗೆದುಹಾಕಬೇಕು, ಬೇರೆಯವರನ್ನು ಹಾಕಬೇಕೆನ್ನತಕ್ಕಂಥದ್ದು ಇದೆ. ಬಹಳಷ್ಟು ಜನ they are creating a problem. ಏಕೆಂದರೆ, ನನಗೂ ಕೂಡ ನೇರ ಅನುಭವವಾಗಿದೆ. ನಾನು ಒಂದು ಸಾರಿ ಹೋಗಿದ್ದೆ. ನಾನು letter ಬರೆದರೂ ಕೂಡ ತಂದು ಕೊಡುವುದಿಲ್ಲ. ಏಕೆ ತಂದು ಕೊಡುವುದಿಲ್ಲ ಎಂದು ಗೊತ್ತಾಗಲಿಲ್ಲ. File ತನ್ನಿ ಎಂದರೆ ತರುತ್ತೇವೆ ಸಾರ್ ಎನ್ನುತ್ತಾರೆ, ತರುವುದೇ ಇಲ್ಲ. ನನಗೆ ಗೊತ್ತಾಯಿತು. ಅವರ demands fulfill ಆಗಿಲ್ಲ ಎಂದು ಹೇಳಿ ತರಲಿಲ್ಲವೆಂದು ಗೊತ್ತಾಯಿತು. ನಾನು ಅಲ್ಲಿಗೆ ಸ್ಥಳಕ್ಕೆ ಹೋದೆ. ಸ್ಥಳಕ್ಕೆ ಹೋಗಿ ಕೇಳಿದರೆ, ಎಲ್ಲರಿಗೂ ಕಿವಿ ಇದೆ, ಯಾರೋ ಫೋನ್ ಮಾಡಿ ಹೇಳಿದ್ದಾರೆ, ಸಾಹೇಬರು ಬರುತ್ತಿದ್ದಾರೆಂದು ಹೇಳಿದ್ದಾರೆ. ಮನುಷ್ಯ ಜಾಗ ಖಾಲಿ ಮಾಡಿದ್ದ. ಸೀದಾ ನಾನು ಕಛೇರಿಗೆ ಹೋದರೆ, 200–300 ಜನ ಅರ್ಜಿಗಳನ್ನು ಹಿಡಿದುಕೊಂಡು ಕಾಯುತ್ತಿದ್ದಾರೆ. ಅಷ್ಟೂ ಜನರನ್ನು ಕೂರಿಸಿಕೊಂಡು Principal Secretary, Commissioner ಅವರೂ ಬಂದರು. ನೀವು ರಾತ್ರಿ 12 ಗಂಟೆಯೊಳಗೆ ಯಾರ್‍ಯಾರು ಅರ್ಜಿ ತೆಗೆದುಕೊಂಡು ಬಂದಿದ್ದಾರೆ, ಅದನ್ನು dispose ಮಾಡಿಯೇ ನನ್ನ ಹತ್ತಿರ ನಾಳೆ ಬೆಳಗ್ಗೆ ಬರಬೇಕೆನ್ನುವ ಮಾತನ್ನು ಹೇಳಿದೆ. ಯಾರು ನನಗೆ ಹೇಳಿದ್ದರು, ಅವರನ್ನು ಕೇಳಿದೆ, ಎಲ್ಲಿಗೆ ಹೋಗಿದ್ದಾರೆಂದು. ಆಸ್ಪತ್ರೆಗೆ ಹೋಗಿದ್ದಾರೆಂದರು. ಯಾವ ಆಸ್ಪತ್ರೆಗೆ ಎಂದು ನಾನು ಫೋನ್ ಮಾಡಿದೆ. ನಾನು ಆಸ್ಪತ್ರೆಗೆ ಹೋಗಿದ್ದೇನೆಂದರು. ಯಾವ ಆಸ್ಪತ್ರೆ ಎಂದೆ. ಚಿನ್ಮಯಿ ಮಿಷನ್‌ಗೆ ಹೋಗಿದ್ದೇನೆ ಎಂದರು. ಸರಿ ಆಯಿತು ಬಿಡಿ ಎಂದೆ. ನಾನು ಅವರಿಗೆ ಹೇಳಲಿಲ್ಲ. ಚಿನ್ಮಯಿ ಮಿಷನ್‌ಗೆ ಫೋನ್ ಮಾಡಿದೆ. ಇಂಥವರು ಬಂದಿದ್ದಾರೆಯೇ ಎಂದು ಕೇಳಿದೆ. Admit ಆಗಿದ್ದಾರೆಯೇ, outpatient ಆಗಿದ್ದಾರೆಯೇ ಎಂದು ಕೇಳಿದೆ. Outpatient ಇಲ್ಲ, inpatient ಇಲ್ಲ. ಮತ್ತೆ ಫೋನ್ ಮಾಡಿ, ಎಲ್ಲಿ ಆಸ್ಪತ್ರೆಗೆ ನಿಮ್ಮನ್ನು ನೋಡೋಣ ಎಂದು ಹೊರಟಿದ್ದೇನೆ, ನೀವು ಎರಡಲ್ಲೂ ಇಲ್ಲ, outpatient list ನಲ್ಲೂ ಇಲ್ಲ

ಎಂದು ಕೇಳಿದೆ, ಇಲ್ಲ ಸಾರ್ ನಾನು ಮನೆಗೆ ಹೋಗುತ್ತಿದ್ದೇನೆ ಹುಷಾರಿಲ್ಲವೆಂದರು. ಇಂಥದ್ದನ್ನೆಲ್ಲ ಇದರೊಳಗೆ ಶಿಸ್ತನ್ನು ತರಬೇಕು ಎಲ್ಲ ಪ್ರಯತ್ನಗಳನ್ನು ಇತಿಮಿತಿಯಲ್ಲಿ ಏನು ಮಾಡಲಿಕ್ಕೆ ಸಾಧ್ಯವಿದೆ that we have done it. ಇದರೊಳಗೆ ಈ ರೀತಿ ಆಡಳಿತಾತ್ಮಕವಾದ ವ್ಯವಸ್ಥೆಯಲ್ಲಿ ಏನೇನು ಸಾಧ್ಯವಿದೆ ಎಲ್ಲಾ ಪ್ರಯತ್ನಗಳನ್ನು ಕೂಡ ನಾವು ಮಾಡಿದ್ದೇವೆ. Transfer Policy ಕೂಡ ಇವತ್ತಿನ policy ಅಲ್ಲ. ಕಳೆದ ವರ್ಷದ ಅವಧಿಯಲ್ಲಿ ನಲವತ್ತಾರು ಸಾವಿರ ಜನ transfer ಕೇಳಿ ಸಿಗದಿದ್ದವರಿದ್ದಾರೆ. Transfer ಕೇಳಿ request ಕೇಳಿ ನಮ್ಮ counseling ವ್ಯಾಪ್ತಿಯಿಂದ ಹೊರಗೆ ಉಳಿದವರು ನಲವತ್ತಾರು ಸಾವಿರ ಜನರಿದ್ದಾರೆ. ಅವರಿಗೆ ನಾವು ಎಲ್ಲರಿಗೂ transfer ಕೊಡುವುದಾದರೆ, ಅದರೊಳಗೆ ಹದಿನಾರರಿಂದ ಹದಿನೇಳು ಸಾವಿರ ಜನ couples ಇದ್ದಾರೆ. ನಮ್ಮ ಅನೇಕ ಇಲಾಖೆಗಳಲ್ಲಿರುವ total strength ಮೂರರಿಂದ ನಾಲ್ಕು ಸಾವಿರ. ನಮ್ಮಲ್ಲಿ ನಲವತ್ತಾರು ಸಾವಿರ ಜನ transfer ಕೇಳಿ ಸಿಗದಿದ್ದವರಿದ್ದಾರೆ. ಅವರಿಗೆಲ್ಲಾ relief ಕೊಡುವುದಕ್ಕೆ it is not possible ಅದಕ್ಕೂ ನಾವೊಂದು ಪ್ರಯತ್ನ ಮಾಡಿದ್ದೇವೆ. ಯಾರೋ ಮಾನ್ಯ ಸದಸ್ಯರು Transfer Policy ಬಗ್ಗೆ ಮಾತನಾಡುತ್ತಾ transfer ಮಾಡಬೇಕೆಂದು ಹೇಳಿದರು. ಅದಕ್ಕೆ ನಾವೊಂದು ಬದಲಾವಣೆ ತರಬೇಕೆಂದು calculate ಮಾಡಿದರೆ ಪತಿ–ಪತ್ನಿ ಇದ್ದಾರೆ, ಅವರೆಲ್ಲರನ್ನೂ correct ಆಗಿ ಒಂದು ಕಡೆ ನಾವು ಸೇರಿಸುವಂಥ ಪ್ರಯತ್ನ ಮಾಡಿ ಎಲ್ಲರನ್ನೂ ಒಟ್ಟಿಗೆ ಸೇರಿಸಿದರೆ we have to to close down further five thousand schools. ನಾವು ಶಿಕ್ಷಣವನ್ನು ಬೇರೆಯವರ ನೆಮ್ಮದಿಗಾಗಿ create ಮಾಡಿದ್ದಲ್ಲ. ಶಿಕ್ಷಣ ಇಲಾಖೆ ಇರುವುದು ಮಕ್ಕಳಿಗಾಗಿ ಮಕ್ಕಳಿಗೆ ಪಾಠ ಹೇಳಿಕೊಡುವುದಕ್ಕಾಗಿಯೇ ವಿನಃ ಇತರರ ರಕ್ಷಣೆಗಾಗಿ ಅಲ್ಲ ಎನ್ನುವುದನ್ನೂ ಕೂಡ ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು, those who are arguing for it. ಆದರೆ, ಎಲ್ಲೋ ಒಂದು ಕಡೆ relief ಕೊಡುವುದು ಮನುಷ್ಯ ಧರ್ಮ. ಅದಕ್ಕೆ ಕೂಡ ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೆ actually ನಾವು Ordinance ಮಾಡಿ ಪತಿ–ಪತ್ನಿಯರು ಯಾರು five years and above ಹೊರಗಡೆ ಇದ್ದಾರೆ, ten years and above ಅವರಿಗೆ transfer ಸಿಕ್ಕಿಲ್ಲ, ಅವರಿಗೆ reflief ಕೊಡಬೇಕೆಂದು

ನಾನು Ordinance ನ್ನು move ಮಾಡಿದ್ದೆವು. ಆದರೆ, ಕಾನೂನು ಇಲಾಖೆಯವರು ಇದು Actಗೆ ವಿರುದ್ಧವಾಗುತ್ತದೆಂದು ಹೇಳಿದರು. ಆದರೆ, ನಾವು amendment ತಂದು ಖಂಡಿತವಾಗಿ ಕೂಡ nearly 8%ಗೆ ಅವರಿಗೆ ಅವಕಾಶ ಮಾಡತಕ್ಕಂಥದ್ದು ಮಾಡಿ, maximum relief ಕೊಡತಕ್ಕಂಥ ಎಲ್ಲಾ ಪ್ರಯತ್ನಗಳನ್ನು ಕೂಡ ಮಾಡುತ್ತೇವೆ. ಇದರ ಜೊತೆಗೆ ಬಹಳ ದೊಡ್ಡ ಸಮಸ್ಯೆಗಳಿದ್ದವು. ನಾನು ಬಂದ ಸಂದರ್ಭದಲ್ಲಿ ಅನೇಕ ಅಲ್ಪಸಂಖ್ಯಾತರ, ಹಿಂದುಳಿದ ವರ್ಗಕ್ಕೆ ಸೇರಿದಂಥ ಅನೇಕ ಕಡತಗಳು ಹಾಗೇ ಉಳಿದಿದ್ದವು. ಅವುಗಳನ್ನೆಲ್ಲವನ್ನೂ ಕೂಡ ಮಾಡತಕ್ಕಂಥ ಕೆಲಸ ನಮ್ಮ ಅವಧಿಯಲ್ಲಿ ಮಾಡಿದ್ದೇವೆನ್ನುವುದನ್ನೂ ಕೂಡ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಬಹಳ ಮುಖ್ಯವಾಗಿರತಕ್ಕಂಥದ್ದು ಪ್ರತಿ ನಿತ್ಯ paper ನಲ್ಲಿ ನೋಡಿ ನಮಗೆ ನೋವು ಆಗುವಂಥದ್ದು, ಪ್ರತಿನಿತ್ಯ ನಮ್ಮನ್ನು ಕೇಳುವಂಥದ್ದು. ಏನೆಂದರೆ, ಸುಮಾರು ಐವತ್ತು ಸಾವಿರ ಶಾಲೆಗಳಿವೆ. ಈ ಐವತ್ತು ಸಾವಿರ ಶಾಲೆಗಳು ಸುಸ್ಥಿತಿಯಲ್ಲಿಲ್ಲ. ಇದನ್ನು ನಾನು ಕಳೆದ ವರ್ಷವೇ ಮೊದಲನೇ ಸಾರಿಗೆ ಆ ಬಗ್ಗೆ estimate ಮಾಡಿಸಿದೆ. ಐವತ್ತು ಸಾವಿರ ಶಾಲೆಗಳೇನಿವೆ ಅದರೊಳಗಡೆ ಯಾವ್ಯಾವು ನಾದುರಸ್ಥಿಯಾಗಿವೆ ಅವುಗಳನ್ನು up date ಮಾಡುವುದಕ್ಕೆ ಏನು ಖರ್ಚು ಬೇಕಾಗುತ್ತದೆ ಎಂದರೆ, ಪ್ರತಿ ಜಿಲ್ಲೆಗೆ ಎಂಭತ್ತರಿಂ ನೂರಾಮೂವತ್ತು ಕೋಟಿ ರೂಪಾಯಿ ಹಣ ಬೇಕು. ಪ್ರತಿ ತಾಲ್ಲೂಕಿಗೆ ಒಂದು Assembly Segmentಗೆ ಕನಿಷ್ಟ ಹತ್ತು ಕೋಟಿ ರೂಪಾಯಿಗಳನ್ನು ನಾವು supply ಮಾಡಬೇಕಾಗುತ್ತದೆ, in order to up date the minimum facilities. Minimum facilities ಎಂದರೆ ಈಗಿರುವ ವ್ಯವಸ್ಥೆಯನ್ನು ಸುಧಾರಣೆ ಮಾಡಲಿಕ್ಕೆ. ಐವತ್ತು ವರ್ಷಗಳಿಂದಲೂ ಅದನ್ನು ಮುಂದುವರಿದುಕೊಂಡು ಬರದಿದ್ದರೆ ಏನಾಗುತ್ತಿರಲಿಲ್ಲ. ಏಕ ಕಾಲದಲ್ಲಿ ಅದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾವು ಏನು ಮಾಡಿದೆವು ಎಂದರೆ, ಒಂದು pilot project ಮಾಡಿದ ಹಾಗೆ, ಮಾಡಿ, ಕಳೆದ ವರ್ಷದ ಹಣ ಅಲ್ಲದೆ ಈ ವರ್ಷ ಕೂಡ ಹೆಚ್ಚಿನ ಹಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಅದರೊಳಗೆ ಅಲ್ಪ ಸ್ವಲ್ಪ ಸರಿ ಮಾಡಬೇಕೆನ್ನುವ ಉದ್ದೇಶವಿಟ್ಟುಕೊಂಡು ನಾವು ಯೋಚನೆ ಮಾಡಿದ್ದೇವೆ.

ಏಕೆಂದರೆ, ನಾನು ಕೂಡ ಶಾಸಕನಾಗಿ ಕೆಲಸ ಮಾಡಿದ್ದೇನೆ. ಪ್ರತಿ ನಿತ್ಯ ಅಲ್ಲಿ ಹೆಂಚು ಬಿದ್ದು ಹೋಗಿದೆ ಎಂದರೆ, ನಾನು ಕೂಡ ಶಾಸಕನಾಗಿ ಕೆಲಸ ಮಾಡಿದ್ದೇನೆ. ಪ್ರತಿ ನಿತ್ಯ ಅಲಿ ಹೆಂಚು ಬಿದ್ದು ಹೋಗಿದೆ ಎಂದರೆ ನಮ್ಮ ಹತ್ತಿರ ದುಡ್ಡು ಇಲ್ಲ. ಇಲ್ಲಿ ಗೋಡೆ ಬಿದ್ದು ಹೋಗಿದೆ ಎಂದರೆ ಒಂದು ಲಕ್ಷ ರೂಪಾಯಿಗಳನ್ನು ಶಾಲೆಗೆ ಕೊಡುವುದಕ್ಕಾಗುವುದಿಲ್ಲ. ನಾವು ಶಾಸಕರಾಗಿ ಜನರ ಹತ್ತಿರ ಪ್ರತಿನಿತ್ಯ ಬೈಯಿಸಿಕೊಳ್ಳಬೇಕು. ಅದಕ್ಕೆ ನಾನೇನು ಯೋಚನೆ ಮಾಡಿದೆನೆಂದರೆ, ನೂರಾಎಂಭತ್ತೊಂಬತ್ತು ಗ್ರಾಮೀಣ ಪ್ರದೇಶದ ಶಾಸಕರುಗಳೇನಿದ್ದಾರೆ, ಅವರಿಗೆ ಕನಿಷ್ಟ ನಲವತ್ತು ಲಕ್ಷವನ್ನಾದರೂ additional grant ಆಗಿ ತೆಗೆದುಕೊಂಡು ಅದನ್ನು ಅನುಮೋದನೆ ಮಾಡಬೇಕು, ಆ ಸಂದರ್ಭದಲ್ಲಿ at least minimum ಒಂದು ಹತ್ತರಿಂದ ಮೂವತ್ತು ಶಾಲೆಗಳನ್ನು repair ಮಾಡಿ, ಕುಡಿಯುವ ನೀರು ಮತ್ತು ಶೌಚಾಲಯಕ್ಕಾದರೂ minimum ವ್ಯವಸ್ಥೆ ಮಾಡಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹೆಚ್ಚಿಗೆ ಹಣ ನೀಡುವುದರ ಮೂಲಕ ನಾನು ಅದನ್ನು ಇಲಾಖೆಯ ಮೂಲಕ ಹಂಚುವುದನ್ನು ಕೈಬಿಟ್ಟೆ. ಏಕೆಂದರೆ, ಪ್ರತಿ ನಿತ್ಯ ಶಾಸಕರುಗಳು ಏನು ಕಷ್ಟ ಅನುಭವಿಸಿದ್ದಾರೆ ನಾನು ಕೂಡ ಶಾಸಕನಾಗಿ ಆ ಕಷ್ಟವನ್ನು ಅನುಭವಿಸಿದ್ದೇನೆ. ಆದ್ದರಿಂದ, ನಾನೇನು ಯೋಚಿಸಿದೆ ಎಂದರೆ, ನಮ್ಮ ಮಿತ್ರರಾದ ಹ್ಯಾರಿಸ್‌ರವರು ಈಗ ಇಲ್ಲಿ ಇಲ್ಲ. ಅವರು ನನಗೊಂದು suggest ಮಾಡಿದರು. ಏನೆಂದರೆ, Sir, town ನಲ್ಲಿ ಇನ್ನೂ ಅದ್ವಾನವಿದೆ, actually ಆ ಕಡೆ Corporation ನವರು ನೋಡುವುದಿಲ್ಲ, ಈ ಕಡೆ ಜಿಲ್ಲಾ ಪಂಚಾಯಿತಿಯವರು ನೋಡುವುದಿಲ್ಲ, ಬಹಳ ತೊಂದರೆಯಾಗಿದೆ ಎಂದು ಹೇಳಿದರು. Then we extended it to the entire state. ಇನ್ನೂರಾಇಪ್ಪತ್ತೈದು ಇನ್ನೂರಾಇಪ್ಪತ್ತೈದು ಜನ ಯಾರು ಶಾಸಕರುಗಳಿದ್ದಾರೆ ಎಲ್ಲರಿಗೂ ಕೂಡ ಅದನ್ನು ನಮ್ಮ ಇಲಾಖಾವಾರು distribute ಮಾಡಬೇಕಾದಂಥ ಹಣದ ವ್ಯವಸ್ಥೆಯನ್ನು ಇಡೀ ಶಾಸನ ಸಭೆಯ ಎಲ್ಲಾ ಸದಸ್ಯರಿಗೂ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಅದು ಈಗಾಗಲೇ ಇಲಾಖೆಯಲ್ಲಿದೆ. ನಾವು ಶಾಸಕರಾಗಿದ್ದಾಗ ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ ಒಂದು ಕೋಟಿ

ಕೊಡುವುದನ್ನು ಒಂದು ಸಲ ಎರಡು ಕೋಟಿ ಮಾಡಲಿ, ನಮ್ಮ ಜನರಿಗೆ ಉತ್ತರ ಹೇಳುವುದು ಹೇಗೆ ಎಂದು ಕೇಳುತ್ತಿದ್ದೆವು. ಈಗ ಶಿಕ್ಷಣ ಇಲಾಖೆಯಲ್ಲಿ ನಮ್ಮ ಹತ್ತಿರ ಹಣವೇ ಇಲ್ಲ. ಆದರೂ ಕೂಡ ಇಡೀ ನಮ್ಮ ಸದನದ ಇನ್ನೂರಾಇಪ್ಪತ್ತೈದು ಜನ ಸದಸ್ಯರೆಲ್ಲರ ನಿಧಿಗೆ ಕೊಡಬೇಕಾಗಿ...

ಶ್ರೀ ಎಸ್.ಹೆಚ್.ಕೋನರೆಡ್ಡಿ:– ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಸ್ವಲ್ಪ ಹೆಚ್ಚಿಗೆ ಮಾಡಿ.

ಶ್ರೀ ಕಿಮ್ಮನೆ ರತ್ನಾಕರ್:– ಆದ್ದರಿಂದ, ಅದನ್ನು ಕೂಡ ನಾವು ಮಾಡತಕ್ಕಂಥ ಪ್ರಯತ್ನ ಮಾಡಿದ್ದೇವೆ. ಇನ್ನೂ ಹೆಚ್ಚಿನ ಅನುದಾನ ಕೊಡುವುದಕ್ಕೆ ವಾಸ್ತವವಾಗಿ ನಾವು ಪ್ರಸ್ತಾವನೆ ಸಲ್ಲಿಸಿದ್ದೇವೆ. ಸುಮಾರು ಎರಡು ಸಾವಿರ ಶಾಲೆಗಳು ನೂರು ವರ್ಷಕ್ಕಿಂತ ಮೇಲ್ಪಟ್ಟ ಶಾಲೆಗಳು ಈ ರಾಜ್ಯದಲ್ಲಿವೆ. ನೂರಾಎಂಭತ್ತಾರು ವರ್ಷದ ಶಾಲೆನೂ ಕೂಡ ಇದೆ. ಅದಕ್ಕೂ ಕೂಡ ನಾನು ಹೆಚ್ಚಿನ ಹಣ ಪಡೆದುಕೊಳ್ಳುವುದಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಆದ್ದರಿಂದ, ನಾವೇನು ಈಗ ವ್ಯವಸ್ಥೆ ಮಾಡಿದ್ದೇವೆ, ಖಂಡಿತವಾಗಿಯೂ ಎಲ್ಲಾ ಕಡೆನೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಮಾನ್ಯ RDPR Minister ರವರ ಜೊತೆಗೂ ನಾನು ಸಂಪರ್ಕ ಮಾಡಿದೆ. ಅವರ ಮನೆಗೆ ನಾನು ಎರಡು ಬಾರಿ ಹೋಗಿ ಏನು ಹೇಳಿದೆ ಎಂದರೆ, ಶೌಚಾಲಯ ಮತ್ತು ಕುಡಿಯುವ ನೀರು ವ್ಯವಸ್ಥೆ ಏನಿದೆ ಈ ವಿಷಯವಾಗಿ ನಿಮ್ಮ department ಕೂಡ ನಮ್ಮ ಜೊತೆಗೆ ಕೈ ಜೋಡಿಸಬೇಕು, ನಾವೊಂದು ನಲವತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಏಕೆಂದರೆ, ನಾವಿಬ್ಬರೂ ಸೇರಿ ಇಡೀ ರಾಜ್ಯದಲ್ಲಿರತಕ್ಕಂಥ ಈ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಸರಿಪಡಿಸಬೇಕೆಂದಾಗ ಅವರು ಕೂಡ ಇದಕ್ಕೆ ಸಹಕಾರ ಕೊಟ್ಟಿದ್ದಾರೆ. ಆದ್ದರಿಂದ, ಈ ವ್ಯವಸ್ಥೆಯಲ್ಲಿ ಏನು ಬದಲಾವಣೆ ಮಾಡುವುದಕ್ಕೆ ಸಾಧ್ಯ ಅದನ್ನು ಮಾಡಿದ್ದೇವೆ. ಸುಮಾರು ನಾನೂರಾತೊಂಭತ್ತೊಂದು PU college ಬೇಕೆಂದು request ಇದೆ. ಆದರೆ, ಈ ವರ್ಷ ಕಳೆದ ಒಂದು ವರ್ಷದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಹಣವನ್ನು ಮಾನ್ಯ ಮುಖ್ಯಮಂತ್ರಿಗಳೂ ನಮ್ಮ

ಇಲಾಖೆಗೆ ನೀಡಿದ್ದಾರೆ. ಅದು ಕ್ಷೀರ ಭಾಗ್ಯ ಇರಬಹುದು, ಮುನ್ನೂರ ಎಂಟು ಶಾಲೆಗಳಿಗೆ ಮುನ್ನೂರು ಕೋಟಿ ರೂಪಾಯಿ ಆಗಬಹುದು, ಅಥವಾ B.Ed. College ನ teachers ಗೆ ಸಂಬಂಧಪಟ್ಟಂತೆ ಇರಬಹುದು, ಎಲ್ಲಾ ಒಟ್ಟಿಗೆ ಸೇರಿದರೆ ಹತ್ತಿರ ಹತ್ತಿರ ಸುಮಾರು ಎಂಟು ನೂರರಿಂದ ಸಾವಿರ ಕೋಟಿ ರೂಪಾಯಿ ನಮ್ಮ ಇಲಾಖೆಗೆ ಹೆಚ್ಚುವರಿಯಾಗಿ ನಾವು ಪಡೆದುಕೊಂಡಿದ್ದೇವೆ. ನಮಗೆ ಬರುವ ಹದಿನಾರು ನಮಗೆ ಬರುವ ಹದಿನಾರು ಸಾವಿರ ಕೋಟಿ ರೂಪಾಯಿಯಲ್ಲಿ, ಹನ್ನೊಂದೂವರೆಯಿಂದ ಹನ್ನೆರಡು ಸಾವಿರ ಕೋಟಿ ರೂಪಾಯಿಗಳು ವೇತನಕ್ಕೆ ಹೋಗುತ್ತಿದೆ. ಸುಮಾರು ಒಂದೂವರೆ ಸಾವಿರದಿಂದ ಸಾವಿರದ ಆರುನೂರು ಕೋಟಿ ರೂಪಾಯಿಗಳು ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಕ್ಕೆ ಹೋಗುತ್ತಿದೆ. ಸೈಕಲ್‌ಗೆ ಸುಮಾರು ನೂರ ಎಪ್ಪತ್ಮೂರು ಕೋಟಿ ರೂಪಾಯಿ ಹೋಗುತ್ತಿದೆ. ಇಡೀ ರಾಜ್ಯದ ಐವತ್ತು ಸಾವಿರ ಶಾಲೆಗಳ ಕೊಠಡಿಗಳ ಸಂಖ್ಯಾಧಾರಪಡಿಸಿಕೊಂಡು ಐದು ಸಾವಿರದಿಂದ ಎಪ್ಪತ್ತೈದು ಸಾವಿರ ರೂಪಾಯಿವರೆಗೆ ವಾರ್ಷಿಕವಾಗಿ ಎಲ್ಲಾ ಶಾಲೆಗಳಿಗೆ Maintenance Grant ನ್ನು ನಾವು ಕೊಡುತ್ತಿದ್ದೇವೆ. ಇದು ಸಾಕಾಗುವುದಿಲ್ಲವೆಂಬುದು ನಮಗೆ ಗೊತ್ತಿದೆ. ಜೊತೆಗೆ ಎಲ್ಲಾ ಕಡೆ ಇನ್ನೂ ಅತ್ಯುತ್ತಮವಾಗಿ ಮಾಡುವುದಕ್ಕೆ ಏನೇನು ಸಾಧ್ಯವಿದೆ, ಸಾರ್ವಜನಿಕ ವಲಯದೊಂದಿಗೆ ಸಹಕಾರ ತೆಗೆದುಕೊಂಡು ಈ ಎಲ್ಲಾ ಶಾಲೆಗಳನ್ನು ಇನ್ನು ಒಂದು ಒಂದೂವರೆ ವರ್ಷದೊಳಗೆ ಪೂರ್ಣವಾಗಿ ಸರಿಪಡಿಸಬೇಕೆನ್ನುವ ಇಚ್ಛೆ ನಮಗಿದೆ. ಖಂಡಿತವಾಗಿ ಸರ್ಕಾರ ಮತ್ತು ಸಾರ್ವಜನಿಕರು ನಾವೆಲ್ಲರೂ ಸೇರಿ ಇದನ್ನು ಸರಿಪಡಿಸತಕ್ಕಂಥ ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ಹೇಳುತ್ತಾ, ನಾನು ಈಗಾಗಲೇ ಹೇಳಿದ ಹಾಗೆ, ನಮ್ಮ ಇಲಾಖೆಯ ಮೇಲೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರೆಲ್ಲರೂ SDMCಯ ಬಗ್ಗೆ ಮಾತನಾಡಿ ನಾವು ಏನು ಮಾಡಬೇಕೆಂದು ಮಾತನಾಡಿದ್ದಾರೆ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:– ಮಾನ್ಯ ಉಪಾಧ್ಯಕ್ಷರು, ನಲವತ್ತು ಲಕ್ಷ ರೂಪಾಯಿಗಳನ್ನು ಪ್ರತಿ ಶಾಸಕರುಗಳಿಗೆ ಕೊಡಲಾಗುವುದು ಎಂದು

ಮಾನ್ಯ ಸಚಿವರು ಈಗ ಹೇಳಿದರು. ಅದನ್ನು ಯಾವ ರೀತಿ ಹಂಚುತ್ತೀರಿ ಎಂಬುದನ್ನು ಸ್ವಲ್ಪ ದಯಮಾಡಿ ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್:- ನೀವೇನು ಪಟ್ಟಿ ಕೊಡುತ್ತೀರಿ ಅದನ್ನು approve ಮಾಡುತ್ತೇವೆ. ಅನೇಕ ಸದಸ್ಯರು ನಾನಾ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಕೆಲವು ಸದಸ್ಯರು ನಿರ್ಮಿತಿ ಕೇಂದ್ರಕ್ಕೆ ಕೊಡಿ ಎನ್ನುತ್ತಿದ್ದಾರೆ. ಕೆಲವು ಸದಸ್ಯರು ZPಗೆ ಕೊಡಿ ಎಂದು ಹೇಳುತ್ತಿದ್ದಾರೆ. Release ಆದ ತಕ್ಷಣ ಆ ಬಗ್ಗೆ ಕುಳಿತುಕೊಂಡು ಮಾತನಾಡುತ್ತೇನೆ. ಏಕೆಂದರೆ, ಎಲ್ಲಾ ಕಡೆ ಒಂದು ರೀತಿಯ ಕಲಸುಮೇಲೋಗರ ಆಗಬಾರದು. ಕೆಲವು ಕಡೆ ನಿರ್ಮಿತಿ ಕೇಂದ್ರಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಇನ್ನ ಕೆಲವು ಕಡೆ ನಿರ್ಮಿತಿ ಕೇಂದ್ರಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲ. ಎಲ್ಲಾ ಕಡೆ common ಆಗಿಲ್ಲ. Land Army ಕೆಲವು ಕಡೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಕೆಲವು ಕಡೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಿಲ್ಲ. I am interested to go along with the ZP. ತಾಲ್ಲೂಕು ತಾಲ್ಲೂಕು ಪಂಚಾಯಿತಿ ಮೂಲಕ ಮಾಡಬಹುದು.

ಶ್ರೀ ಹಂಪನಗೌಡ ಬಾದರ್ಲಿ:- ಮಾನ್ಯ ಸಚಿವರೆ, ಆ ಕ್ಷೇತ್ರದ ಶಾಸಕನಿಗೆ ಕೊಟ್ಟು ಬಿಟ್ಟರೆ ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳುತ್ತಾರೆ.

ಶ್ರೀ ಕಿಮ್ಮನೆ ರತ್ನಾಕರ್:- ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವೈ.ಎಸ್.ವಿ.ದತ್ತಾ:- ಮಾನ್ಯ ಸಚಿವರೇ, ಇದನ್ನು ಆಯಾ ಶಾಸಕರ ವಿವೇಚನೆಗೆ ಬಿಟ್ಟರೆ ಆಯಿತು. ಏಕೆಂದರೆ, ಅವರ ಕ್ಷೇತ್ರದಲ್ಲಿ ಲ್ಯಾಂಡ್ ಆರ್ಮಿ ಅಥವಾ ನಿರ್ಮಿತಿ ಕೇಂದ್ರ ಸರಿಯಾಗಿದೆಯೇ ಎಂದು ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಆದ್ದರಿಂದ, ನೀವು ಇದನ್ನು uniform ಆಗಿ ಮಾಡುವ ಬದಲು ಆಯಾ ಕ್ಷೇತ್ರದ ಶಾಸಕರ ವಿವೇಚನೆಗೆ ಬಿಟ್ಟಿದ್ದೇವೆಂದು ಹೇಳಿದರೆ ಒಳ್ಳೆಯದು.

ಶ್ರೀ ಕಿಮ್ಮನೆ ರತ್ನಾಕರ್:- ಯಾವುದಾದರೂ ಪರವಾಗಿಲ್ಲ. I am in open minde. ಅದರ ಬಗ್ಗೆ ನನಗೇನೂ ಅಭ್ಯಂತರವಿಲ್ಲ. ಒಟ್ಟಿನಲ್ಲಿ ಇಲಾಖೆಯ ಬೇಡಿಕೆಗೆ ಇಲ್ಲಿ ಅಪ್ರೂವಲ್ ಆದ ಮೇಲೆ ಬಿಡುಗಡೆಗೆ ವ್ಯವಸ್ಥೆ ಆಗುತ್ತದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಮಾನ್ಯ ಸಚಿವರೇ, ಶಾಲೆ ನಿರ್ವಹಣೆಗೆಂದು 5-10 ಸಾವಿರ ರೂಪಾಯಿ ಕೊಡುತ್ತಿರುವುದು ವೇಸ್ಟ್. ಏಕೆಂದರೆ, ಆ ಹಣ ಖರ್ಚಾಗುತ್ತಿಲ್ಲ, ಅದು ದುರುಪಯೋಗ ಆಗುತ್ತಿದೆ. ಆದ್ದರಿಂದ, ಆಯಾ ಕ್ಷೇತ್ರಕ್ಕೆ ಇನ್ನೂ ಎಷ್ಟೆಷ್ಟು ಬರುತ್ತದೆಯೋ ಅದರ ಜೊತೆಗೆ ಈ ಹಣವನ್ನು ಸೇರಿಸಿ ಕೊಡಿ.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಶಿವಲಿಂಗೇಗೌಡರೆ, ನೀವು ಹೇಳಿರುವುದು ಸರಿ ಇದೆ. ಆದರೆ, ಎಲ್ಲಾ ಕಡೆ ಆ ರೀತಿ ಆಗುತ್ತಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ನಮ್ಮಲ್ಲಂತೂ ಆ ಹಣ ಲೆಕ್ಕಕ್ಕೇ ಇಲ್ಲ.

ಶ್ರೀ ಬಿ.ಆರ್.ಪಾಟೀಲ್:- ಆ ಹಣ ಎಲ್ಲಿಯೂ ಸಹ ಖರ್ಚಾಗುತ್ತಿಲ್ಲ. ಬಹಳಷ್ಟು ಕಡೆ ದುರುಪಯೋಗವಾಗುತ್ತಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಈ ಹಣವನ್ನು ಇದರಲ್ಲಿ ಸೇರಿಸಿ ಕೊಡಿ. ನಾವು ರಿಪೇರಿ ಮಾಡಿಸುತ್ತೇವೆ.

ಶ್ರೀ ಬಿ.ಆರ್.ಪಾಟೀಲ್:- ಕೆಲವು ಕಡೆ 100 ಕ್ಕೆ 100 ದುರುಪಯೋಗವಾಗುತ್ತಿದೆ.

ಶ್ರೀ ಕಿಮ್ಮನೆ ರತ್ನಾಕರ್:- ಈ ಬಗ್ಗೆ ಯೋಚನೆ ಮಾಡೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಏಕೆಂದರೆ, ಇದಕ್ಕೆ ಬಹಳ ದುಡ್ಡು ಬರುತ್ತದೆ.

ಶ್ರೀ ಕಿಮ್ಮನೆ ರತ್ನಾಕರ್:- ಈ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಮಾಡಿ.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಉಪಾಧ್ಯಕ್ಷರೇ, ಆ ಬಗ್ಗೆ ಖಂಡಿತ ಪರಿಶೀಲನೆ ಮಾಡುತ್ತೇವೆ. ಬಯೋಮೆಟ್ರಿಕ್ ಬಗ್ಗೆ ಹೇಳಿದ್ದಾರೆ. ಆದರೆ, ಬಯೋಮೆಟ್ರಿಕ್ ತುಂಬಾ costly item ಆಗಿವೆ. Actually, ಅದನ್ನು ಮಾಡಬೇಕೆಂದು ನಮಗೆ ಇಷ್ಟ ಇದೆ. ಆದರೆ ನಾವು ಸ್ಕೂಲ್‌ಗಳನ್ನು ರಿಪೇರಿ ಮಾಡುವುದನ್ನು ಬಿಟ್ಟು ಬಯೊಮೆಟ್ರಿಕ್ ಮಾಡುವುದಕ್ಕೆ ಹೋದರೆ ಅದು ಇನ್ನೂ ಹೆಚ್ಚು costly ಆಗುತ್ತದೆಂಬ ಕಾರಣಕ್ಕಾಗಿ ಆ ಬಗ್ಗೆ ಯೋಚನೆ ಮಾಡುತ್ತಿಲ್ಲ. Actually I am interested in it. ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಆದರೆ, ಅದು ನಮಗೆ costly ಆಗುತ್ತದೆ ಎಂಬ ಉದ್ದೇಶ ಇದೆ. ಗ್ರಂಥಾಲಯದ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಹಣ ವಸೂಲ್ಮಾಡಬೇಕೆಂದು ಮತ್ತು ನನ್ನ ವೇತನವನ್ನು ಕೊಡುವುದಕ್ಕೆ ನಾನು ತಯಾರು ಇದ್ದೇನೆಂದು ಮಾನ್ಯ ರಾಜೀವ್‌ರವರು ಹೇಳಿದರು. ಈ ನಿಟ್ಟಿನಲ್ಲಿ ಸಾರ್ವಜನಿಕ ವಲಯದಲ್ಲಿ ನಾನು ಕಳೆದ ವರ್ಷದಿಂದಲೇ ಪ್ರಾರಂಭ ಮಾಡಿದ್ದೇನೆ ಇಲ್ಲಿರುವ ಪ್ರತಿಷ್ಠಿತ ಕಂಪನಿಗಳು ಹಾಗೂ ಉದ್ಯಮಸ್ಥರು ಯಾರ್‍ಯಾರು ಇದ್ದಾರೆಯೋ ಅವರೆಲ್ಲರನ್ನೂ ಸಂಪರ್ಕ ಮಾಡುತ್ತೇನೆ. ಈ ಸದನ ಮುಗಿದ ತಕ್ಷಣವೇ ಕನಿಷ್ಠ 100 ಜನ ಉದ್ಯಮಸ್ಥರ ಒಂದು ಸಭೆಯನ್ನು ಕರೆಯುತ್ತೇನೆ. ಅವರು ಏನು ಸಹಾಯ ಮಾಡುತ್ತಾರೆಂದು ನೋಡಿಕೊಂಡು ಆನಂತರ ಇಡೀ ರಾಜ್ಯದಲ್ಲಿರತಕ್ಕಂಥ ಸ್ಕೂಲ್‌ಗಳನ್ನು ಸುಸ್ಥಿತಿಗೆ ತರುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ಖಂಡಿತ ಪ್ರಯತ್ನ ಮಾಡುತ್ತೇವೆ. ಹಾಗೆಯೇ ಗುಣಮಟ್ಟದ ಶಿಕ್ಷಣ ಮಾಡುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆಂಬ ಮಾತನ್ನು ಹೇಳುತ್ತಾ ತಾವೆಲ್ಲರೂ ಕೂಡ ನಮ್ಮ ಇಲಾಖೆಯ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಎಸ್.ವಿ.ದತ್ತಾ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರಗಳು ಮತ್ತು ಮಾನ್ಯ ಶಾಸಕರು ಹೇಳಿರುವ ಅನುಮಾನಗಳು, ಎಲ್ಲದರ ಬಗ್ಗೆ ಕೂಡ ನೀವು ಉತ್ತರ ಕೊಟ್ಟಿದ್ದೀರಿ, ಬಹಳ ಮುಖ್ಯವಾಗಿ, ನಮ್ಮ ಕೈಯಲ್ಲಿ ಇಲ್ಲದರ ಬಗ್ಗೆ ನಿಮ್ಮನ್ನು ನಾವು ಹಿಂಡಿ ಹಿಪ್ಪೆ

ಮಾಡುವುದಕ್ಕೆ ಹೋಗುವುದಿಲ್ಲ. ಈಗ ಏಕರೂಪ ಶಿಕ್ಷಣ, ಸಮಾನ ಶಿಕ್ಷಣ, ಪ್ರಾಥಮಿಕ ಶಿಕ್ಷಣದ ಬಗ್ಗೆ ನಾನು ನಿನ್ನೆ tip of an iceberg ಎಂದು ಒಂದು statistics ಕೊಟ್ಟೆ ನಮ್ಮ ಭಾಗದಲ್ಲಿ Lower Primary and Higher Primary Schools ಹಣೆಬರಹ ಏನಾಗಿದೆ ಎಂಬುದರ ಬಗ್ಗೆ ನೀವು ಗಮನಕೊಡಬೇಕು. ಕಟ್ಟಡ ಇದೆ, ಎಲ್ಲ ವ್ಯವಸ್ಥೆ ಇದೆ. ಆದರೆ ಮೇಸ್ಟ್ರುಗಳು ಕೂಡ ಸರಿ ಇಲ್ಲದ್ದು ಒಂದು ಇದೆ. ಇವತ್ತು ಶಿಕ್ಷಕರುಗಳಿಗೆ ಒಳ್ಳೆಯ training ಬೇಕಾಗಿದೆ. ಬಹಳ ಮುಖ್ಯವಾಗಿ ಪೋಷಕರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಏಕೆ ಕಳುಹಿಸುತ್ತಿಲ್ಲ ಎನ್ನುವುದಕ್ಕೆ ಅದೂ ಒಂದು ಕಾರಣವಾಗಿದೆ. ಎರಡನೆಯದಾಗಿ, ನಿಮ್ಮಲ್ಲಿ ಎಷ್ಟು ಕ್ಯಾಟಗರಿ ಮೇಸ್ಟ್ರುಗಳು ಇದ್ದಾರೋ ನನಗೆ ಗೊತ್ತಿಲ್ಲ. ಪಾಪ, ನಿಮಗೂ ಕೂಡ ಎಷ್ಟು ತಲೆನೋವಾಗಿದೆ ಎಂದು ನನಗೆ ಅರ್ಥವಾಗುತ್ತದೆ. ಹೊರಗುತ್ತಿಗೆ ಶಿಕ್ಷಕರು, ಅತಿಥಿ ಉಪನ್ಯಾಸಕರು, ಸರ್ವಶಿಕ್ಷಣ ಅಭಿಯಾನ ಶಿಕ್ಷಕರು, ರೆಗ್ಯುಲರ್ ಶಿಕ್ಷಕರು, ದಿನಗೂಲಿ ಶಿಕ್ಷಕರು, ಎಷ್ಟು ತರಹ ಇದ್ದಾರೆಂದರೆ ಅವರೆಲ್ಲರೂ ಒಂದು ಸಾರಿ strike ಮಾಡಿಬಿಟ್ಟರೆ, ಅದಕ್ಕೆ ಒಂದು ಜಾಗದಲ್ಲಿ ಟೆಂಟ್ ಹಾಕಿಕೊಂಡರೆ ಸುಮಾರು 20 ಟೆಂಟ್‌ಗಳನ್ನು ಹಾಕಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಅಷ್ಟು ಕ್ಯಾಟಗರಿ ಮೇಸ್ಟ್ರುಗಳು ಇದ್ದಾರೆ. ಇವರೆಲ್ಲರನ್ನೂ ಕೂಡ ಒಂದೇ ಶಿಸ್ತಿಗೆ ಒಳಪಡಿಸುವಂಥದ್ದರ ಬಗ್ಗೆ ನಿಮ್ಮ ಅಧಿಕಾರಗಳ ಜೊತೆಗೆ ಕುಳಿತುಕೊಂಡು ಏನಾದರೂ ಒಂದು ಪ್ಲಾನ್‌ನ್ನು ಮಾಡಿ. ಆಗ ಅರ್ಧ ಸಮಸ್ಯೆಗಳು ಬಗೆಹರಿಯುತ್ತವೆ. ಇನ್ನೊಂದು ಕಡೆ ಇದು ಏಕೆ ಬಹಳ ಮುಖ್ಯ ಎಂದರೆ ವರ್ಗಾವಣೆ ಸಮಯದಲ್ಲಿ ಇವತ್ತು ನಾವು ಆ ಶಿಕ್ಷಕರ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸರ್ವಶಿಕ್ಷಣ ಅಭಿಯಾನದ ಮೇಸ್ಟ್ರುಗಳು ಇದ್ದಾರೆ, ಇವತ್ತು ನೀವು ಅನೇಕ ಸರ್ವ ಶಿಕ್ಷಣ ಅಭಿಯಾನದ ಶಾಲೆಗಳನ್ನು ರದ್ದುಮಾಡಿದ್ದೀರಿ. Am I right? ಯಾರೋ ಅಧಿಕಾರಿ ಕುಳಿತುಕೊಂಡು ಒಂದು ಕಾನೂನನ್ನು ಮಾಡಿ ಒಂದು Executive Order ಹೊರಡಿಸಿಬಿಟ್ಟರು. ಏನೆಂದರೆ, ಸರ್ವ ಶಿಕ್ಷಣ ಅಭಿಯಾನದ ಶಾಲೆಗಳ ಶಿಕ್ಷಕರುಗಳನ್ನು ಸರ್ವ ಶಿಕ್ಷಣ ಅಭಿಯಾನ ಶಾಲೆಗಳಿಗೇ ವರ್ಗಾವಣೆ ಮಾಡತಕ್ಕದ್ದು ಅಂದರು. ಆ Order ಮಾಡಿದ ಅಧಿಕಾರಿಗೆ ಪ್ರಜ್ಞೆ ಇದ್ದಿದ್ದರೆ, ಆ ಶಾಲೆಗಳನ್ನು ನಾವೇ ರದ್ದುಮಾಡಿದ್ದೇವೆ, ಹಾಗಾದರೆ ಇವರನ್ನು ಎಲ್ಲಿಗೆ

ಹಾಕೋಣ ಎಂದು ಯೋಚನೆ ಮಾಡಬೇಕಾಗಿತ್ತು. ಇವತ್ತು ಸರ್ವ ಶಿಕ್ಷಣ ಅಭಿಯಾನದ ಶಾಲೆಗಳು ರದ್ದಾಗಿವೆ, ಈ ಮೇಸ್ಟ್ರುಗಳನ್ನು ವರ್ಗಾವಣೆ ಮಾಡುವುದಕ್ಕೆ ಇನ್ನೊಂದು ಶಾಲೆ ಇಲ್ಲ. ಅವರನ್ನು ವರ್ಗಾವಣೆ ಮಾಡುವುದಾದರೆ ನೀವು ಅವರನ್ನು ಬೇರೆ ಕಡೆಗೆ ಹಾಕಲೇಬೇಕಲ್ಲ. ಇಂತಹ ಪ್ರಕರಣಗಳಲ್ಲಿ ಅಧಿಕಾರಿಗಳು ಸ್ವಲ್ಪ ವಿವೇಚನೆಯಿಂದ ವರ್ತಿಸಬೇಕಾಗುತ್ತದೆ. ಸರ್ವ ಶಿಕ್ಷಣ ಅಭಿಯಾನದ ಮೇಸ್ಟ್ರುಗಳನ್ನು ಉಳಿದ ಶಾಲೆಗಳಿಗೂ ಕೂಡ ವರ್ಗಾವಣೆ ಮಾಡಿ ಅವರ ಸೇವೆಯನ್ನು ಏಕೆ ಬಳಕೆ ಮಾಡಿಕೊಳ್ಳಬಾರದೆಂದು ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಸಚಿವರೇ, ಎಲ್ಲದಕ್ಕೂ ಒಟ್ಟಿಗೇ ಉತ್ತರ ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ದತ್ತಾರವರಿಗೆ ಉತ್ತರ ಕೊಟ್ಟುಬಿಡುತ್ತೇನೆ. ಏಕೆಂದರೆ ಅವರು ಪ್ರಸ್ತಾಪ ಮಾಡಿದ issue different ಇದೆ. ಮಾನ್ಯ ದತ್ತಾರವರು ಪ್ರಶ್ನೆ ಎತ್ತಿದರು, ಅದರಲ್ಲಿ ಒಂದು ಸಮಸ್ಯೆ ಇದೆ. Actually, ಸರ್ವ ಶಿಕ್ಷಣ ಅಭಿಯಾನದ ಮೂಲಕ ಹಣ ಬರುವುದು Centrla Sector ನಿಂದ. ನಾವೇನಾದರೂ ಸರ್ವ ಶಿಕ್ಷಣ ಅಭಿಯಾನದಿಂದ ಬಂದಿರತಕ್ಕಂಥ ಶಿಕ್ಷಕರನ್ನು State Sectorಗೆ transfer ಮಾಡಿಸಿಕೊಂಡರೆ Central Sectorನವರು ಹಣ ಕೊಡುವುದಿಲ್ಲ. ಮತ್ತೆ ನಮಗೆ ಹಣ ಬರುವುದಿಲ್ಲ. Actually, ನಾನು ಇನ್ನೂ ಒಂದು ಗಂಟೆ ಕಾಲ ಉತ್ತರ ಕೊಡಬೇಕಾಗಿತ್ತು. ಉದ್ದೇಶಪೂರ್ವಕವಾಗಿಯೇ ನಾನು ಕಡಿಮೆ ಮಾಡಿದೆ. ಅನೇಕ ವಿಚಾರಗಳನ್ನು ನಾನು ಪ್ರಸ್ತಾಪ ಮಾಡಲಿಲ್ಲ. ಅದರಲ್ಲಿ ಇದೂ ಒಂದು. State Sectorನಲ್ಲಿ ಸಮಸ್ಯೆ ಏನೆಂದರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಒಂದು ಮಾತನ್ನು ಹೇಳಿದರು, ನೀವು 5–6 programmeಗಳನ್ನು ಕೈಬಿಟ್ಟಿರುವುದರಿಂದಾಗಿ ಕೇಂದ್ರದಿಂದ ಬರಬೇಕಾದ 800–1,000 ಕೋಟಿ ರೂಪಾಯಿ ಕಡಿಮೆ ಆಯಿತು ಎಂದು ಹೇಳಿದರು. ಏಕೆ ಕಡಿಮೆ ಆಯಿತು? ಅದು ನಮ್ಮಿಂದ ಆಗಿದ್ದಲ್ಲ. ಹಿಂದಿನ ಅವಧಿಯಲ್ಲಿ HRD Minister ರವರ ಬಳಿ ಹೋಗಿ correct ಆಗಿ convince ಮಾಡುವುದಕ್ಕೆ

ನಮ್ಮಿಂದಾಗಲಿಲ್ಲ. ಹಿಂದೆ ವಿದ್ಯಾರ್ಥಿಗಳಿಗೆ ಬಟ್ಟೆ ಕೊಡುವುದು ಏನಿತ್ತು, ಅದಕ್ಕೆ ಟೆಂಡರ್ ಕರೆದರು. Central Government ನಿಂದ ಬಟ್ಟೆಗೆಂದು ಏನು ಹಣ ಕೊಡುತ್ತಿದ್ದರು, ಅದು per student 200 ರೂಪಾಯಿ ಎಂದು Betterment Committeeಗೆ ಕೊಡಬೇಕೆಂದು ಇತ್ತು. ಇವರು 4 ವರ್ಷಗಳೂ ಟೆಂಡರ್ ಕರೆದರು. *That is against* the norms laid down *by the Central* Government. ಅದು audit objections ಆಗಿ, we have curtailed to the extent of ₹ 800-1,000 crores ಅದನ್ನು ನಾವು State Sectorನಿಂದ accommodate ಮಾಡುವುದಕ್ಕಾಗುವುದಿಲ್ಲ. ಅನೇಕ ಕಾರ್ಯಕ್ರಮಗಳು ರದ್ದಾಗಿರುವುದಕ್ಕೆ that is also one of the reasons. He has to answer for that. ಇದೇನಾಗುತ್ತದೆ ಎಂದರೆ, ಅನೇಕ ಜನ ನನ್ನ ಹತ್ತಿರ ಬಂದಿದ್ದಾರೆ, KATಗೂ ಹೋಗಿದ್ದಾರೆ.

ಶ್ರೀ ವೈ.ಎಸ್.ವಿ.ದತ್ತಾ:– KAT order ಮಾಡಿದೆ.

ಶ್ರೀ ಕಿಮ್ಮನೆ ರತ್ನಾಕರ್:– ಅದು ನನಗೆ ಗೊತ್ತಿದೆ. ಅವರು KAT ಗೆ ಹೋಗಿ ಸ್ಟೇ ತೆಗೆದುಕೊಂಡರು. ಆನಂತರ ನಾನೇನು ಮಾಡಿದೆ ಎಂದರೆ, ವಿಧಾನ ಪರಿಷತ್ತಿನ ಗೌರವಾನ್ವಿತ ಸದಸ್ಯರು ಏನು ಹೇಳಿದರೆಂದರೆ, ಕೋರ್ಟ್ ಆರ್ಡರ್ ಆಗಿದ್ದರೂ ಸಹ ನಿಮ್ಮ ಅಧಿಕಾರಿಗಳು execute ಮಾಡುತ್ತಿಲ್ಲವೆಂದು ಹೇಳಿದರು. ನಾನು follow the order of the court as per the direction given by the court ಎಂದು ಹೇಳಿದೆ. ಆನಂತರ ನಾನು ಕ್ಲಾರಿಫಿಕೇಷನ್ ಕೇಳಿದೆ. This is the problem. We are not against the court order, ಆದರೆ, problem ಏನೆಂದರೆ, ಆ ಹಣ ಮತ್ತೆ ನಮಗೆ ಬರುವುದಿಲ್ಲ. So, we have to utilize *the Central* Fund. That is the reason. ಆದ್ದರಿಂದ, *ಬೇರೆ* ಕಾರಣ ಏನಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಎನ್.ಬಾಲಕೃಷ್ಣ(ಶ್ರವಣಬೆಳಗೊಳ):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ಪುಸ್ತಕಗಳನ್ನು ಶಾಲೆಗಳಿಗೆ ಸಕಾಲದಲ್ಲಿ ವಿತರಣೆ ಮಾಡಿದ್ದಾರೆ, ಹಾಗೆಯೇ ಆಡಳಿತಾತ್ಮಕ ಸುಧಾರಣೆಗಳನ್ನು ತರುವಂಥ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿರುವುದು ಕೂಡ

ಸ್ವಾಗತಾರ್ಹವಾದಂಥ ವಿಚಾರ. ಇವತ್ತು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ವಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಹಿಂದಿನ ಸಾಲಿನಲ್ಲಿ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ 20 ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಇತ್ತು. ಆದರೆ, ಕಳೆದ ವರ್ಷದಿಂದ ಸರ್ವ ಶಿಕ್ಷಣ ಅಭಿಯಾನದ ಯೋಜನೆ ಅಡಿಯಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡುವುದಕ್ಕೆ ಅನುದಾನ ಇದುವರೆಗೂ ಬಿಡುಗಡೆ ಆಗಿಲ್ಲ. ಅಕಸ್ಮಾತ್ Central Government ನಿಂದ ಫಂಡ್ ಬರದೇ ಹೋದರೆ, ಏಕೆಂದರೆ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕೂಡ ಸುಮಾರು ನೂರಾರು ಕೊಠಡಿಗಳು ದುರಸ್ಥಿ ಮಾಡತಕ್ಕಂಥ ಸ್ಥಿತಿಯಲ್ಲಿಯೂ ಕೂಡ ಇಲ್ಲ. ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ವಾರ್ಷಿಕವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಲಿಕ್ಕೆ ಅನುದಾನವನ್ನು ಬಿಡುಗಡೆ ಮಾಡತಕ್ಕಂಥದ್ದು ಬಹು ಮುಖ್ಯವಾಗಿದೆ. ದುರಸ್ಥಿ ಮಾಡುವುದಕ್ಕಾಗಿ 40 ಲಕ್ಷ ರೂಪಾಯಿ ನೀಡುತ್ತೇವೆಂದು ಮಾನ್ಯ ಶಿಕ್ಷಣ ಸಚಿವರು ಹೇಳಿದ್ದಾರೆ. ಇದು ಸ್ವಾಗತಾರ್ಹವದ ವಿಚಾರ. ಕಟ್ಟಡಕ್ಕು ಕೂಡ ಹೆಚ್ಚಿನ ಅನುದಾನ ನೀಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಇವತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ RMS ಯೋಜನೆ ಅಡಿಯಲ್ಲಿ ಮೊದಲನೇ ಹಂತದ ಕಾಮಗಾರಿ ಪ್ರಗತಿಯಲ್ಲಿದೆ. ಆದರೆ, ಎರಡನೇ ಹಂತದ ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ನಾವು ಇದ್ದೇವೆಂದು ತಿಳಿಸಿದ್ದಾರೆ.

ಆದರೆ ನಗರ ಪ್ರದೇಶಕ್ಕೆ RMS ಯೋಜನೆ ಅನ್ವಯ ಆಗುವುದಿಲ್ಲ. ಆದ್ದರಿಂದ RIDF ಯೋಜನೆ ಅಡಿಯಲ್ಲಿ ಬೇಡಿಕೆಗಳಿಗೆ ಅನುಗುಣವಾಗಿ ಕಟ್ಟಡಗಳನ್ನು ಕೊಡದೇ ಹೋದರೆ ನಗರದಲ್ಲಿ ನಾವು ಬಡ ವಿದ್ಯಾರ್ಥಿಗಳನ್ನು ನಾವೇ ಖಾಸಗಿ ಶಾಲೆಗಳಿಗೆ ಹೋಗುವುದಕ್ಕೆ ಅವಕಾಶ ಮಾಡಬೇಕಾಗುತ್ತದೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಶಿಕ್ಷಣ ಸಚಿವರು ನಮ್ಮ ಜಿಲ್ಲೆಗೆ review ಗೆ ಬಂದಾಗ ಒಂದು ವಿಚಾರವನ್ನು ನಮಗೆ ಜೊತೆಯಲ್ಲಿ discuss ಮಾಡಿದರು. ಗ್ರಾಮಾಂತರ ಪ್ರದೇಶದಲ್ಲಿ ಕೆಲವೊಂದು ಶಾಲೆಗಳಲ್ಲಿ 8–10 ಮಕ್ಕಳು ಇರುತ್ತಾರೆ, ಒಬ್ಬರೇ Teacher ಇರುತ್ತಾರೆ. ದಯಮಾಡಿ 1

ರಿಂದ 7ನೇ ತರಗತಿಯವರೆಗೆ 25 ಮಕ್ಕಳು ಇದ್ದರೆ ಇಬ್ಬರು Teachers ಇರುತ್ತಾರೆ. ಏಕೆಂದರೆ 30 ವಿಷಯಗಳನ್ನು ಇಬ್ಬರು Teachers ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಮಾನ್ಯ ಸಚಿವರು ಏನು ಹೇಳಿದರು? ಪಂಚಾಯತಿ ವ್ಯಾಪ್ತಿಯಲ್ಲಿ ಎರಡು–ಮೂರು ಶಾಲೆಯ ಮಕ್ಕಳನ್ನು ಒಂದು ಶಾಲೆಗೆ ವಾಹನದ ಮೂಲಕ ಕರೆ ತಂದು ಅಲ್ಲಿ 4–5 ಜನ Teachers ಗಳ ಮೂಲಕ ಗುಣಮಟ್ಟದ ಶಿಕ್ಷಣವನ್ನು ನೀಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಹಾಸನ ಜಿಲ್ಲೆಗೆ ಬದಂಥ ಸಂದರ್ಭದಲ್ಲಿ ನೀಡಿದರು. ಅದರ ಜೊತೆಗೆ ಪದವಿಪೂರ್ವ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹೊಸ ಕಾಲೇಜುಗಳನ್ನು ತೆರೆಯುವುದರ ಬಗ್ಗೆ 400–500 ಶಾಸಕರು ಮನವಿ ಮಾಡಿದ್ದಾರೆಂದು ಹೇಳಿದರು. ಇರತಕ್ಕಂಥ ಪದವಿಪೂರ್ವ ಕಾಲೇಜುಗಳಿಗೆ ಬಲವರ್ಧನೆ ಈ ಸರ್ಕಾರ ಕಳೆದ 14 ತಿಂಗಳಲ್ಲಿ ಏನು ಪ್ರಯತ್ನ ಮಾಡಿದೆ ಎನ್ನತಕ್ಕಂಥದ್ದು ಮುಖ್ಯ. ಏಕೆಂದರೆ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಚನ್ನರಾಯಪಟ್ಟಣ ನಗರದಲ್ಲಿ 2200 ಮಕ್ಕಳು ಎರಡೇ ಕಾಲೇಜಿನಲ್ಲಿ ಓದುತ್ತಿದ್ದಾರೆ. ದಯಮಾಡಿ ಅಲ್ಲಿ 10 ರಿಂದ 15 ಕೊಠಡಿಗಳು ಬೇಕಾಗಿದೆ. 70 ರಿಂದ 140 ಮಕ್ಕಳು ಒಂದೊಂದು ಕೊಠಡಿಯಲ್ಲಿದ್ದಾರೆ. ಅಲ್ಲಿ 86% result ಬಂದಿದೆ. ಅದಕ್ಕೆ RIDF ಯೋಜನೆ ಅಡಿಯಲ್ಲಿ ಇದುವರೆಗೆ ಕೊಠಡಿಗಳು ಮಂಜೂರು ಆಗಿಲ್ಲ. ದಯಮಾಡಿ ಅದರ ಬಗ್ಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು:– ನೀವು ಭಾಷಣ ಮಾಡಿದರೆ ಆಗುವುದಿಲ್ಲ. One or two points ಮಾತ್ರ clarification ನಲ್ಲಿ ಕೇಳಬೇಕು. Specific ಆಗಿ ಏನಾಗಬೇಕು ಎನ್ನುವುದನ್ನು ಕೇಳಬೆಕು.

ಶ್ರೀ ಕೆ.ಜಿ.ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, RMS ಯೋಜನೆಯಲ್ಲಿ ತಾವು ಕಟ್ಟಡಗಳನ್ನು ಕೊಟ್ಟಿದ್ದೀರಿ. ನಮಗೂ ಖುಷಿ ಆಯಿತು ನಾವು ಹೋಗಿ ಗುದ್ದಲಿ ಪೂಜೆಯನ್ನು ಮಾಡಿದೆವು. ವರ್ಷದ ಮೇಲೆ ಆಯಿತು. ಇಲ್ಲಿಯವರೆಗೂ ಕೂಡ ಕಂಟ್ರಾಕ್ಟರ್ ಬಂದು ಆ

ಕಟ್ಟಡಗಳನ್ನು ಪ್ರಾರಂಭ ಮಾಡಿಲ್ಲ. ಅವರು ರಾಜ್ಯ ಮಟ್ಟದ ಕಂಟ್ರಾಕ್ಟರ್ ಎಂದು ಕಾಣುತ್ತದೆ. ಇಲ್ಲಿಯವರೆಗೆ ಬಂದು ಪ್ರಾರಂಭ ಮಾಡಿಲ್ಲ. ನಾಗಾರ್ಜುನ ಗ್ಲೋಬಲ್‌ದವರು ಇರಬಹುದು ಅವರು ಇನ್ನೂವರೆಗೆ ಬಂದು ಏಕೆ ಪ್ರಾರಂಭ ಮಾಡಿಲ್ಲ ಎನ್ನುವುದು ಗೊತ್ತಾಗಬೇಕು. ದಯಮಾಡಿ ಅದಕ್ಕೆ specific ಆಗಿ ಉತ್ತರವನ್ನು ಹೇಳಬೇಕು.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಕಾಗೇರಿಯವರು ಮಾತನಾಡುತ್ತಾ 1000 ರೂ.ಗಳು ಕೇಂದ್ರದಿಂದ ಬರಬೇಕಾಗಿದ್ದು ಸಮಯಕ್ಕೆ ಸರಿಯಾಗಿ ಉಪಯೋಗ ಮಾಡಿಕೊಳ್ಳದೆ RMS ಯೋಜನೆಯಲ್ಲಿ ನಾವು ಕೆಲಸ ಮಾಡಿಕೊಳ್ಳಲಿಲ್ಲ. ಅವರಿಗೆ Global contract ಮಾಡಿದಿರಿ. ಕೇಂದ್ರದಿಂದ ಬರಬೇಕಾದ ಆ ದುಡ್ಡು ಬಂದಿಲ್ಲ. ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ RMS ಕೆಲಸ ಎಲ್ಲಿಯೂ ಕೂಡ ಆಗುತ್ತಿಲ್ಲ. ಅದಕ್ಕೆ ನೀವು ಉತ್ತರ ಹೇಳಬೇಕು. ಬಹಳ ಮುಖ್ಯವಾದುದು ಹಿಂದೆ ಪ್ರೊ:- ಬಿ.ಕೆ.ಚಂದ್ರಶೇಖರ್‌ರವರು ಶಿಕ್ಷಣ ಸಚಿವರಾಗಿದ್ದಾಗ 7ನೇ ತರಗತಿಯನ್ನು 8ನೇ ತರಗತಿಗೆ ತಂದು ಮುಂದೆ SSLC ಅನ್ನು ತೆಗೆದುಹಾಕಿ ಪರೀಕ್ಷೆಯನ್ನಾಗಿ ಮಾಡಬೇಕೆಂದು ಮಾಡಿದರು. ಆ ಗೊಂದಲ ಇವತ್ತು ಕೂಡ ನಿವಾರಣೆ ಆಗಿಲ್ಲ. ಕೆಲವು ಕಡೆ 7ನೇ ತರಗತಿ ಇದೆ, ಕೆಲವು ಕಡೆ 8ನೇ ತರಗತಿಯೂ ಇವೆ. ಅಲ್ಲಿ 8ನೇ ತರಗತಿ TGT Teachers ಇಲ್ಲ. Trained Graduate Teachers. ಈ ಗೊಂದಲವನ್ನು ನೀವು ಖಾಯಂ ಆಗಿ ಬಗೆಹರಿಸಿ. 7ನೇ ತರಗತಿ ಆದರೂ ಇಟ್ಟುಕೊಳ್ಳಿ, ಇಲ್ಲವೆಂದರೆ ಎಲ್ಲದಕ್ಕೂ 8ನೇ ತರಗತಿ ಮಾಡಿಬಿಡಿ. NCERT ಯಲ್ಲಿ uniform syllabus ತರಬೇಕೆನ್ನುವ ಹಿನ್ನೆಲೆಯಲ್ಲಿ ಆ 7 ಮತ್ತು 8ನೇ ತರಗತಿಯ ಗೊಂದಲ ಆಗಿರುವುದು. ಅದನ್ನು ಯಾವ ತರಹ implement ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಮರಾಠಿ ಮತ್ತು ಉರ್ದು Teachers ಇಲ್ಲ. ಇದರ ಬಗ್ಗೆ ಕೂಡ ದಯಮಾಡಿ ಹೇಳಿಬಿಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಶಿಕ್ಷಕರಿಗಾಗಿ ನಮ್ಮಲ್ಲಿ ವಸತಿ ಗೃಹಗಳನ್ನು ಕಟ್ಟಿದ್ದೀರಿ. ಅವೆಲ್ಲಾ club ಗಳಾಗಿವೆ, ಅಲ್ಲಿ ಯಾರೂ

ಇಲ್ಲ. ಗುರುಭವನ ಅಲ್ಲ, ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿ ಒಂದು ಒಳ್ಳೆಯ concept ದಿಂದ ಮೇಷ್ಟ್ರುಗಳು ಅಲ್ಲಿಯೇ ಇದ್ದು tuition ಮಾಡಲಿ ಮಕ್ಕಳನ್ನು ಮೇಲಕ್ಕೆತ್ತಲಿ ಎಂದು ಒಳ್ಳೆಯ scheme ತಂದಿದ್ದಾರೆ. ಆದರೆ ಒಬ್ಬರೂ ಮೇಷ್ಟ್ರು ಇಲ್ಲ. 5 ಗಂಟೆ ಆಗುತ್ತಿದ್ದಂತೆ ಮೋಟಾರ್ ಸೈಕಲ್ ಹತ್ತಿಕೊಂಡು ಮನೆಗೆ ಹೋಗಿ ಮಲಗಿಕೊಳ್ಳುತ್ತಾರೆ. ಅವುಗಳಿಗೆ ಬಾಡಿಗೆ ವಸೂಲು ಮಾಡುತ್ತಿದ್ದೀರಾ, ಅವರು ಅಲ್ಲಿಯೇ ಹೋಗಿ ಮಲಗಿಕೊಳ್ಳಲಿ, ಆದರೆ ಬಾಡಿಗೆಯಾದರೂ ತೆಗೆದುಕೊಳ್ಳಬೇಕಲ್ಲಾ. ನೀವು ಲಕ್ಷಾಂತರ ರೂ.ಗಳನು ಕೊಟ್ಟು ಬಿಲ್ಡಿಂಗ್ ಕಟ್ಟಿಸಿ ನಮ್ಮಲ್ಲಿ 6 quarters ಕಟ್ಟಿರುತ್ತೀರಿ. ಅದರಲ್ಲಿ ಒಬ್ಬರೂ ಇಲ್ಲ, ಏಕೆ? ಮಾನ್ಯ ಕ್ರೀಡಾ ಸಚಿವರು ಉತ್ತರವನ್ನು ಕೊಡುತ್ತಾರಾ, ಅದರಲ್ಲಿ ನಮ್ಮದೂ ಒಂದು ಇದೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನೀವು ಬೇಕಾದರೆ ಆಮೇಲೆ ಕೇಳಿ. ಈಗ ಅವರದ್ದು ಇರುವುದರಿಂದ ಅವರು ವರದಿ ಕೊಡಬೇಕು.

ಶ್ರೀ ಮಂಕಾಳ ಸುಬ್ಬ ವೈದ್ಯ:- ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಕ್ರೀಡಾಪಟುಗಳಿಗೆ track suite ಕೊಡಲೇಬೇಕು. ಮಾನ್ಯ ಮಂಜುರವರೆ, ಒಂದು ನಿಮಿಷ, ಇಲ್ಲಿ ಮಾತನಾಡುತ್ತಿದ್ದೇನೆ. ತಾಲ್ಲೂಕು ಮಟ್ಟದಲ್ಲಿ ಆಯ್ಕೆಯಾದ ಕ್ರೀಡಾಪಟುಗಳಿಗಾದರೂ track suite ಕೊಡಲೇಬೇಕು. ಅದರ ಜೊತೆಯಲ್ಲಿ RTE Act ನಲ್ಲಿ ಒಂದು ಸ್ಕೂಲಿನಲ್ಲಿ 40 ಮಕ್ಕಳಿಗೆ ಮಾತ್ರ ಕೊಡುತಿದ್ದಾರೆ. ಅದು ಆ ರೀತಿ ಆಗಬಾರದು. ಒಂದು ಸ್ಕೂಲಿನಲ್ಲಿ 100 ಜನ ಮಕ್ಕಳಿದ್ದರೆ ಅದರಲ್ಲಿ 25% ಕೊಡಬೇಕು. ಏನು ಹೇಳುತ್ತಾರೆಂದರೆ, ಒಂದು ಸ್ಕೂಲಿನಲ್ಲಿ ಒಂದು ಕ್ಲಾಸಿಗೆ ಮಾತ್ರ permission ಕೊಟ್ಟಿದ್ದೇವೆಂದು ಹೇಳುತ್ತಾರೆ. BEO ಮತ್ತು DDPI ಗೆ ಅಲ್ಲಿ 100 ಮಕ್ಕಳು ಇರುವುದು ಗೊತ್ತಿರುತ್ತದೆ. 10 ಮಕ್ಕಳಿಗೆ ಮಾತ್ರ selection ಮಾಡುತ್ತಾರೆ ಅದು ಆಗಬಾರದು. RTE Act ನಲ್ಲಿ ಒಂದು ಸ್ಕೂಲಿನಲ್ಲಿ LKG ಗೆ ತೆಗೆದುಕೊಳ್ಳುತ್ತಾರೆ. ಒಂದು ಸ್ಕೂಲಿನಲ್ಲಿ UKG ಗೆ ತೆಗೆದುಕೊಳ್ಳುತ್ತಾರೆ. ಒಂದು ಸ್ಕೂಲಿನಲ್ಲಿ 1st Standard ಗೆ ತೆಗೆದುಕೊಳ್ಳುತ್ತಾರೆ.

ಅದು ಸರಿಯಲ್ಲ, ಸರ್ಕಾರ ಯಾವುದಾದರೊಂದು ಕ್ಲಾಸಿಗೆ fix ಮಾಡಬೇಕು. ಇನ್ನೊಂದು ವಿಷಯ ಅವರು ಮಲೆನಾಡಿನವರು ಆಗಿರುವುದರಿಂದ ಅವರ ಗಮನಕ್ಕೆ ಬಂದಿರಬಹುದು. ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಕ್ರೀಡಾಕೂಟ ನಡೆಯುತ್ತದೆ, ಆಗ ಮಳೆಗಾಲ ಆಗಿರುತ್ತದೆ. ಏಕೆ ಈಗ ನಡೆಸುತ್ತೀರೆಂದು ಕೇಳಿದರೆ ಡಿಸೆಂಬರ್ ತಿಂಗಳಲ್ಲಿ ರಾಜ್ಯಮಟ್ಟದ್ದು ಆಗುತ್ತದೆ ಅಷ್ಟರೊಳಗೆ ready ಆಗಬೇಕೆಂದು ಹೇಳುತ್ತಾರೆ. ಅದಕ್ಕಾಗಿ ಅದನ್ನು change ಮಾಡಬೇಕು. ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಆಗುವಂತೆ ಮಾಡಬೇಕು. ಮಳೆಗಾಲದಲ್ಲಿ ಆದರೆ ಮಕ್ಕಳಿಗೆ ಅನ್ಯಾಯ ಆಗುತ್ತದೆ.

ಶ್ರೀ ಗುರು ಪಾಟೀಲ್ ಶಿರವಾಳ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ RMS ಅಡಿಯಲ್ಲಿ ಕೆಲವು ಶಾಲೆಗಳಿಗೆ ಕಟ್ಟಡ ಆಗಿದೆ. ಅಲ್ಲಿ estimate ಆಗಿದೆ design ಬೇರೆ ರೀತಿಯಾಗಿ ನಾವು construction ಮಾಡಿದ್ದೇವೆ ಅದಕ್ಕೆ payment ಆಗುತ್ತಿಲ್ಲವೆಂದು ಹೇಳಿ ಆ contractor ಗಳು ಅರ್ಧರ್ಧಕ್ಕೆ ನಿಲ್ಲಿಸಿರುತ್ತಾರೆ. ಅವುಗಳನ್ನು ಸಂಪೂರ್ಣವಾಗಿ ಕಟ್ಟಿಸುವಂಥ ಕೆಲಸಗಳು ಆಗಬೇಕು. STMC ಗೆ ತಾವು ಏನೂ ಹೇಳಲಿಲ್ಲ.

ಶ್ರೀ ವಿಜಯಾನಂದ.ಎಸ್.ಕಾಶಪ್ಪನವರ್:- ಮಾನ್ಯ ಉಫಾಧ್ಯಕ್ಷರೆ, ಮಾನ್ಯ ಸಚಿವರು ಸಮಗ್ರವಾಗಿ ಈಗ ತಾನೇ ಇಲಾಖೆಯನ್ನು ಬಹಳ ಸುಧಾರಣೆಯ ಮಟ್ಟಕ್ಕೆ ತರಲು ಪ್ರಯತ್ನಿಸುತ್ತಿದ್ದೇವೆಂಬ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಉರ್ದು ಶಿಕ್ಷಕರನ್ನು ನೇಮಕಾತಿ ಮಾಡುವುದರಲ್ಲಿ ಬಹಳಷ್ಟು ವಿಳಂಬವಾಗುತ್ತಿದೆ. ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ಅನೇಕ ಕಡೆ ಶಿಕ್ಷಕರು ಇಲ್ಲದೇ ಶಾಲೆ ಮುಚ್ಚುವ ಪರಿಸ್ಥಿತಿ ಇವತ್ತು ಬಂದಿದೆ. ನೇಮಕಾತಿ ಮಾಡಬೇಕು ಮತ್ತು ಅವರಿಗೆ ಸುಮಾರು 5-6 ತಿಂಗಳುಗಳಿಂದ ವೇತನ ಕೂಡ ಕೊಟ್ಟಿಲ್ಲ. ಅವರಿಗೆ ತೀವ್ರಗತಿಯಲ್ಲಿ ವೇತನ ಕೊಡುವುದು ಮತ್ತು ಉರ್ದು ಶಿಕ್ಷಕರನ್ನು ನೇಮಕಾತಿ ಮಾಡುವುದು ಆಗಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಡಾ: ಎಸ್.ರಫೀಕ್ ಅಹಮದ್:- ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣ ಇಲಾಖೆಯು ಕೆಲವು ವರ್ಷಗಳಲ್ಲಿ 100% ಸಾಕ್ಷರತೆ ಒದಗಿಸಬೇಕು ಎನ್ನುವ

ಒಳ್ಳೆಯ ಉದ್ದೇಶ ಇಟ್ಟುಕೊಂಡಿದೆ. ಅವರು ತಮ್ಮ ವಾರ್ಷಿಕ ವರದಿಯಲ್ಲಿ ಎಷ್ಟು ವಿದ್ಯಾರ್ಥಿಗಳು ಪ್ರವೇಶ ಹೊಂದಿದ್ದಾರೆಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. 49,50,796 ವಿದ್ಯಾರ್ಥಿಗಳು ದಾಖಲಾತಿ ಹೊಂದಿದ್ದಾರೆ ಅದರಲ್ಲಿ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳು ಎಂದು ಹೇಳಿದ್ದಾರೆ. ಅದರ ಜೊತೆಯಲ್ಲಿ ಮಾನ್ಯ ಸಚಿವರಿಗೆ ನಾನು ಏನು ಮನವಿ ಮಾಡುತ್ತಿದ್ದೇನೆಂದರೆ, ಜಾಸ್ತಿ drop outs ಆಗುವವರು ಅಲ್ಪಸಂಖ್ಯಾತರ ವಿದ್ಯಾರ್ಥಿಗಳು. ಹಾಗಾಗಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಕನ್ನಡ ಮಾಧ್ಯಮ ಶಾಲೆಯಲ್ಲಿ ಎಷ್ಟು ಜನ ಓದುತ್ತಿದ್ದಾರೆಂದು ಅವರ ದಾಖಲಾತಿಗಳನ್ನು ಪಡೆದು ಯಾರು ಪ್ರವೇಶವನ್ನು ಹೊಂದಿಲ್ಲ ಅಂತಹ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರಿಗೆ ಒಂದು ವಿಚಾರವನ್ನು ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇಲಾಖೆಯಲ್ಲಿ ಹೊರಗುತ್ತಿಗೆ, ಅರೆಕಾಲಿಕ, ಅತಿಥಿ ಶಿಕ್ಷಕರ ನೇಮಕಾತಿ ಸಾಕಷ್ಟು ನಡೆಯುತ್ತಿದೆ. ದಿನಗೂಲಿಯಲ್ಲಿಯೂ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ಎಲ್ಲಿಯೂ ಕೂಡ reservation follow ಮಾಡುತ್ತಿಲ್ಲ ನಮ್ಮ ಸಮಿತಿಯಲ್ಲಿಯೂ ಸಾಕಷ್ಟು ಸಲ ನಿಮ್ಮ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ದಯಮಾಡಿ ಈ ವಿಚಾರದಲ್ಲಿ ನೀವು ಒಂದು ಸ್ಪಷ್ಟವಾದ ಆದೇಶವನ್ನು ಸರ್ಕಾರದಿಂದ ಹೊರಡಿಸಲೇಬೇಕು. ಏಕೆಂದರೆ ಇದರಿಂದ ತುಂಬಾ ವಂಚನೆ ಆಗುತ್ತಿದೆ. ಅವರನ್ನು ನೀವು ಇಲಾಖೆಯಲ್ಲಿ absorb ಮಾಡಿಕೊಳ್ಳಬೇಕಾದಂಥ tie ನಲ್ಲಿ ಅವರ seniority ಹೋಗುತ್ತದೆ. ಈ opportunity ಈಗ ಸಿಗಬೇಕಾಗಿರುವುದು reserved candidates ಗೆ ಅದು ಕೂಡ ಹೋಗುತ್ತದೆ. ಜೊತೆಗೆ ಇನ್ನೊಂದು ಷಡ್ಯಂತ್ರ ನಡೆಯುತ್ತಿದೆ, ಇಡೀ ರಾಜ್ಯದಲ್ಲಿ ನಾನು ಗಮನಿಸಿದಂತೆ ಎಲ್ಲೆಲ್ಲಿ Scheduled Caste ಇದೆ ಅದರ ಮೇಲೆ ಕೆಲವೊಂದು ಪ್ರಬಲ ವರ್ಗಗಳು ದಬ್ಬಾಳಿಕೆ ನಡೆಸುತ್ತಿವೆ. ಅದಕ್ಕೆ ಅವಕಾಶ ಆಗಬಾರದು. ಏಕೆಂದರೆ, ಅವರು ಪ್ರಬಲವಾಗಿರುತ್ತಾರೆ. ಅವರಿಗೆ ಜಮೀನು ಜಾಸ್ತಿ

ಸಿಗುತ್ತದೆ, ಸವಲತ್ತುಗಳು, resources ಎಲ್ಲಾ ಇರುತ್ತದೆ. ಎಲ್ಲಿ Scheduled Caste ದು ಇರುತ್ತದೆ ಅದನ್ನು ಪೂರ್ತಿ ಮಟ್ಟ ಹಾಕಬೇಕೆಂದು ನೋಡುತ್ತಿರುತ್ತಾರೆ. ಅದಕ್ಕೆ ಅಂತಹ institutions ಗಳು ಉಳಿದುಕೊಳ್ಳುವುದಕ್ಕೆ ನೀವು ವಿಶೇಷವಾದಂಥ ಒಂದು ಸವಲತ್ತುಗಳನ್ನು ಇಲಾಖೆಯಿಂದ ಕೊಡುವಂಥದ್ದನ್ನು ಮಾಡಬೇಕೆನ್ನುವುದು ನನ್ನ ಮನವಿ ಇದೆ.

ಶ್ರೀ ಶಿವಾನಂದ ಎಸ್.ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಒಂದು ಮೂಲಭೂತ ಸಮಸ್ಯೆ ಇದೆ. ಮಾನ್ಯ ಸಚಿವರು ಬಿಜಾಪುರ ಜಿಲ್ಲೆಗೆ ಬಂದಾಗ ಹೇಳಿದ್ದೆ. ಎಲ್ಲೆಲ್ಲಿ ಇವರಿಗೆ High School, Primary School ಮಾಡಲು ಜಾಗವಿಲ್ಲ ಅಲ್ಲಿ ಭೂದಾನಿಗಳು ಜಾಗ ಕೊಟ್ಟಿದ್ದಾರೆ. ಪಾಪ ಅವರು ತಮ್ಮ ತಂದೆಯ ಹೆಸರು ಇಡಲಿ ಎಂದು ಕೊಟ್ಟಿದ್ದಾರೆ. ನಮ್ಮಲ್ಲಿ 3–3 ಎಕರೆಯಷ್ಟು ಜಮೀನು ದಾನ ಮಾಡಿದ್ದಾರೆ. ಇದುವರೆಗೂ ಅವರ ಹೆಸರು ಇಡಬೇಕೆಂದು ಸರ್ಕಾರದಿಂದ ಆದೇಶ ಬಂದಿಲ್ಲ. ಆ ಉದ್ದೇಶದಿಂದಲೇ ನಾವು ಜಾಗ ತೆಗೆದುಕೊಂಡಿದ್ದೇವೆ. ಏಕೆಂದರೆ ಇಲ್ಲದಿದ್ದರೆ ಇವರಿಗೆ ಜಾಗವೂ ಇರುತ್ತಿರಲಿಲ್ಲ. ಇವರು High School ಗೆ, Primary School ಗೆ ಕಟ್ಟಡ ಕಟ್ಟಲೂ ಆಗುತ್ತಿರಲಿಲ್ಲ. ಅದಕ್ಕೊಂದು ಸರ್ಕಾರಿ ಆದೇಶ ಮಾಡಬೇಕೆಂದು ಮೊದಲನೇ ವಿನಂತಿ. ಆದೇಶ ಇದುವರೆಗೂ ಆಗಿಲ್ಲ. ಪಾಪ ಜಾಗ ಕೊಟ್ಟವರು ಸತ್ತವರ ಹೆಸರನ್ನು ಇನ್ನೂ ಜಾಗಕ್ಕೆ ಇಟ್ಟಿಲ್ಲವೆಂದು ನಮಗೆ ಕೇಳುತ್ತಿದ್ದಾರೆ. ಭೂ ದಾನಿಗಳ ಹೆಸರು ಇಡುವಂತಹ ಆದೇಶ ಆಗಬೇಕು. ಇನ್ನೊಂದು RMSE ನಲ್ಲಿ ಮೇಲ್ವಿಚಾರಣೆ ಮಾಡತಕ್ಕಂಥ್ದು DDPI ಯವರಿಗೆ ಏನು competence ಇದೆ ಎನ್ನುವುದು ನನಗೆ ಗೊತ್ತಿಲ್ಲ. ಅವರೇನು Engineer, ಏನೋ ಎನ್ನುವುದು ಗೊತ್ತಿಲ್ಲ. RMSE School ಇವರು State level tender ಮಾಡುವುದು. ಇವರ ಇಲಾಖೆಯಿಂದ ಮೇಲ್ವಿಚಾರಣೆ ಮಾಡುವಂಥವರು ಒಬ್ಬರೂ ಇಲ್ಲ. ಅವನು ಏನು ಉಸುಕು ಹಾಕುತ್ತಾನೋ, ಕಲ್ಲು ಹಾಕುತ್ತಾನೋ, ಮಣ್ಣು ಹಾಕುತ್ತಾನೋ, ಏನೋ ಹಾಕಿ ಕಟ್ಟಿ ಹೋಗುತ್ತಾನೆ. ಮುಂದೆ ನಮ್ಮ ಮೇಲೇ ಬರುತ್ತದೆ. ಈ M.L.A. ನೋಡಲಿಲ್ಲ, ಜಿಲ್ಲೆಯಲ್ಲಿ 80 ಕೋಟಿ, 90 ಕೋಟಿ ರೂ.ಗಳು ಖರ್ಚಾಯಿತು ಎಂದು

ಹೇಳುತ್ತಾರೆ. ಅದರ ಬಗ್ಗೆ ಏನಾದರೂ ಒಂದು technical monitor ಮಾಡುವುದಕ್ಕೆ ಅಥವಾ PWD ಗಾದರೂ entrust ಮಾಡಿ ಅಥವಾ ಜಿಲ್ಲಾಪಂಚಾಯತ್‌ಗಾದರೂ entrust ಮಾಡಿ. ಇಷ್ಟು ದುಡ್ಡು ನೀವು RMSE ನಲ್ಲಿ ಹಾಳು ಮಾಡಿದ್ದೀರಿ. 400 ಕೋಟಿ, 500 ಕೋಟಿ ರೂ.ಗಳ ಟೆಂಡರ್ ಅನ್ನು State level ನಲ್ಲಿ ಹಿಂದಿನ ಸರ್ಕಾರದಲ್ಲಿ Nagarjun Construction Company ಯವರಿಗೇನೋ ಕೊಟ್ಟಿದ್ದಾರೆ. ಆ ಪುಣ್ಯಾತ್ಮರು ಬರುತ್ತಿಲ್ಲ. ಎಷ್ಟು ದುಡ್ಡು ಹೊಡೆದಿದ್ದಾರೆ ಎನ್ನುವುದೂ ಗೊತ್ತಾಗುತ್ತಿಲ್ಲ.

ಶ್ರೀ ಜೆ.ಟಿ.ಪಾಟೀಲ್:- ಹಿರಿಯ ಅಧಿಕಾರಿಗಳಿಗೆ ಅಧಿಕಾರವೇ ಇಲ್ಲ.

ಉಪಾಧ್ಯಕ್ಷರು:- ಮಾನ್ಯ ಸಚಿವರೆ ಉತ್ತರ ಕೊಡಿ.

ಶ್ರೀ ವೈ.ಎಸ್.ವಿ.ದತ್ತಾ:- ಮಾನ್ಯ ಉಪಾಧ್ಯಕ್ಷರೆ, ಕೊನೆಯದಾಗಿ, ಮೇಷ್ಟ್ರುಗಳನ್ನು ಅಕ್ಷರ ಸಂಯೋಜಕರಾಗಿ ಮಾಡಲು, ನಿರ್ಮಲೀಕರಣ ಸಂಯೋಜಕರು ಎಂದು ಮಾಡುವುದಕ್ಕೆ ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಆ ರೀತಿ ಮಾಡಲು ಅವಕಾಶ ಕೊಟ್ಟು ಕೆಲವು ಮೇಷ್ಟ್ರುಗಳು ಆ ಕೆಲಸ ಮಾಡುತ್ತಿದ್ದರೆ. ಕೆಲವು ಜಿಲ್ಲೆಗಳಲ್ಲಿ ಮಾತ್ರ ಅದಕ್ಕೆ ಅವಕಾಶ ಕೊಟ್ಟಿಲ್ಲ. ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಗೆ ಕೊಟ್ಟು ಈಗ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೊಟ್ಟಿಲ್ಲ. ಗಲಾಟೆ ಮಾಡಿದ ಮೇಲೆ ಕೆಲವು ತಾಲ್ಲೂಕುಗಳಲ್ಲಿ ಆ ರೀತಿ ಮೇಷ್ಟ್ರುಗಳನ್ನು ಮಾಡಿಕೊಳ್ಳಿ ಎಂದು ಹೇಳಿದರು. ನನ್ನ ತಾಲ್ಲೂಕಿನಲ್ಲಿ ಕೊಡಲಿಲ್ಲ. ಆ DDPI ಯವರನ್ನು 'ಎಲ್ಲಾ ಕಡೆ ಮಾಡಿದ್ದೀರಿ ನಮ್ಮ ತಾಲ್ಲೂಕಿಗೆ ಏಕೆ ಕೊಟ್ಟಿಲ್ಲವೆಂದು' ಕೇಳಿದರೆ, 'ಸಾರ್, ನಿಮ್ಮ ತಾಲ್ಲೂಕಿನಲ್ಲಿ ಬಿ.ಜೆ.ಪಿ. ಪಕ್ಷದವರು ಒಂದು ಪಟ್ಟಿ ಕಳುಹಿಸಿದ್ದಾರೆ, ಕಾಂಗ್ರೆಸ್ ಪಕ್ಷದವರು ಒಂದು ಪಟ್ಟಿಯನ್ನು ಕಳುಹಿಸಿದ್ದಾರೆ, ಜೆ.ಡಿ.ಎಸ್.ಪಕ್ಷದವರು ಒಂದು ಪಟ್ಟಿಯನ್ನು ಕಳುಹಿಸಿದ್ದಾರೆ ಅದಕ್ಕೆ ಯಾರದ್ದೂ ಮಾಡುವುದು ಬೇಡ ಎಂದು ತೀರ್ಮಾನ ಮಾಡಿದ್ದೇವೆ' ಎಂದು ಹೇಳುತ್ತಾರೆ. DDPI ಯವರು ಈ ರೀತಿ ಪಕ್ಕಾ ರಾಜಕಾರಣಿಗಳಾದರೆ ಇದಕ್ಕಿಂತ ಇನ್ನೊಂದು ದುರಂತ ಏನು? ಮೇಷ್ಟ್ರುಗಳೇ ದೊಡ್ಡ ರಾಜಕಾರಣಿಗಳಾಗಿದ್ದಾರೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಸ್ಪಷ್ಟವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್.ಪಾಟೀಲ್(ಆಳಂದ):– ಮಾನ್ಯ ಉಪಾಧ್ಯಕ್ಷರೆ,. . .

ಉಪಾಧ್ಯಕ್ಷರು:– ಈ ರೀತಿ 2–3 ಬಾರಿ ಕೇಳಿದರೆ ಹೇಗೆ ಪಾಟೀಲರೇ?

ಶ್ರೀ ಬಿ.ಆರ್.ಪಾಟೀಲ್:– ಎರಡು ಬಾರಿ ಅಲ್ಲ ಸಾರ್. ಈಗ ಮಾನ್ಯ ದತ್ತಾತ್ರರವರೂ ಎರಡು ಬಾರಿ ಕೇಳಿದರು ಅವರಿಗೊಂದು ಮಾನದಂಡ, ನಮಗೊಂದು ಬೇರೆ ಮಾನದಂಡನಾ?

(ಗೊಂದಲ)

ಉಪಾಧ್ಯಕ್ಷರು:– ಅವರು ಕೇಳಿದರು ಎಂದು ಉಪಯೋಗಿಸಿಕೊಂಡರೆ ಹೇಗೆ? ತಾವು ಈಗಾಗಲೇ ಕೇಳಿ ಆಗಿದೆ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್:– ಮಾನ್ಯ ಸಚಿವರೆ, ಕಳೆದ ಬಾರಿ ಹೊಸ ಸರ್ಕಾರ ಬಂದಾಗ ಬಹಳ ಆಶಯದಿಂದ ನಮಗೆ ಹೈಸ್ಕೂಲ್, ಪಿ.ಯು. ಕಾಲೇಜು ಕೊಡುತ್ತಾರೆ ಎಂದು ಎಲ್ಲಾ ದಾರಿ ಕಾದೆವು. ಕಳೆದ ಬಾರಿಯೂ ಕೊಡಲಿಲ್ಲ. ಈ ಬಾರಿಯೂ ಕೊಡುವ ಯಾವುದೇ ಸಂಕೇತಗಳೂ ಇಲ್ಲ. ಪತ್ರಿಕೆಯಲ್ಲಿ ನೋಡಿದೆ 115 ಹೈಸ್ಕೂಲ್‌ಗಳನ್ನು ಮಾತ್ರ ಕೊಡುತ್ತೇವೆ ಎಂದು ಹೇಳಿದ್ದಾರೆ. ಇಂತಹ ಒಂದು ದೊಡ್ಡ ರಾಜ್ಯದಲ್ಲಿ ಶಿಕ್ಷಣಕ್ಕೆ ನೀವು ಎಷ್ಟೆಲ್ಲಾ ಕಾಳಜಿ ವಹಿಸುತ್ತಿದ್ದೀರಿ, ಕಳಕಳಿ ವಹಿಸುತ್ತಿದ್ದೀರಿ?

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಸಾರ್, ಮಾನ್ಯ ಬಿ.ಆರ್.ಪಾಟೀಲ್‌ರವರು ಊರಿಗೆ ಹೋಗುವುದಿಲ್ಲ. ಗ್ಯಾರಂಟಿ ಇಲ್ಲೇ halt. ನಾವು ಊರಿಗೆ ಹೋಗಬೇಕು.

ಶ್ರೀ ಬಿ.ಆರ್.ಪಾಟೀಲ್:– ಅದು ಹಿಂದುಳಿದ ಪ್ರದೇಶಕ್ಕೆ, ಹೈದರಾಬಾದ್ ಕರ್ನಾಟಕಕ್ಕೆ ಸಂವಿಧಾನವನ್ನು ತಿದ್ದುಪಡಿ ಮಾಡಿದ್ದೀರಿ, ಹೊನ್ನೂರು ಪ್ರದೇಶಕ್ಕೆ ಹೈಸ್ಕೂಲ್ ಮತ್ತು ಪಿ.ಯು.ಸಿ. ಕಾಲೇಜುಗಳನ್ನು ಮಾಡದೇ ಹೋದರೆ ಮಕ್ಕಳಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ.

ಬಡವರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ದಯಮಾಡಿ ಆ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ವೈ.ಎಸ್.ವಿ.ದತ್ತಾ:- ಶಾಲಾ ಸಮವಸ್ತ್ರಕ್ಕೆ ಸಂಬಂಧಿಸಿದಂತೆ Handloom Corporation ನವರಿಗೆ ಕೊಡಿ.

(ಗೊಂದಲ)

ಶ್ರೀ ಜೆ.ಟಿ.ಪಾಟೀಲ್:- RMS ಕಟ್ಟಡಗಳಿಗೆ ಸಂಬಂಧಿಸಿದಂತೆ ಮಾಡುವುದಕ್ಕೆ ರಾಜ್ಯ ಮಟ್ಟದಲ್ಲಿ ದಾಸಪ್ಪ ಎನ್ನುವ AEE ರವರಿಗೆ ವಹಿಸಿದ್ದಾರೆ. ಅದರ ಬದಲು ಸ್ಥಳೀಯ DDPI, BEO, Engineer ರವರಿಗೆ ಅಧಿಕಾರ ಕೊಡಿ.

ಶ್ರೀ ಎನ್.ಹೆಚ್.ಕೋನರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ಎರಡೇ ಎರಡು clarification ಕೇಳಿಬಿಡುತ್ತೇನೆ. ಶಿಕ್ಷಣ ಇಲಾಖೆ ಬಹಳ ದೊಡ್ಡದಾದ ಇಲಾಖೆಯಾಗಿದ್ದು, ಅದಕ್ಕೆ ಸೋಮವಾರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಇತ್ತು. ಹೊಸ ತಂತ್ರಜ್ಞಾನದ ಮೂಲಕ ಶಿಕ್ಷಣವನ್ನು ಕೊಡಬೇಕೆಂದು ನಿನ್ನೆ ಮಾನ್ಯ ಸಚಿವರಿಗೆ ಮನವಿ ಮಾಡಿದೆ. Smart class ಎಂದು ರಾಜ್ಯಾದ್ಯಂತ ಬಂದಿದೆ. ಖಾಸಗಿ ಶಾಲೆಗಳಲ್ಲಿ ಬಂದಿವೆ. ಸರ್ಕಾರಿ ಶಾಲೆಗಳಲ್ಲಿ ಬಂದಿಲ್ಲ. ಅದಕ್ಕೆ ವಿಶೇಷವಾಗಿ ಏನು ಖರ್ಚು ಮಾಡಬೇಕೆಂದು ತಮಗೆ ಹೇಳಿದ್ದೆ. ಮೂರು point ಗಳ ಬಗ್ಗೆ ಚರ್ಚೆ ಮಾಡಿದ್ದೇವೆ. 2006ರ ನಂತರ ನೇಮಕಾತಿಯಾದವರ ಬಗ್ಗೆ ಸರ್ಕಾರಿ ಮತ್ತು ಇವರಿಗೆ ಎಲ್ಲರಿಗೂ ಪಿಂಚಣಿ ವ್ಯವಸ್ಥೆ ಆಗಬೇಕು. ಸರ್ಕಾರಿ ನೌಕರರಿಗೆ ವೈದ್ಯಕೀಯ ಭತ್ಯೆ ನೀಡುವ ಹಾಗೆ ಖಾಸಗಿಯವರಿಗೂ ಭತ್ಯೆ ನೀಡಬೇಕೆಂದು ಇದೆ. 2008ರ ನಂತರದಲ್ಲಿ ಖಾಲಿಯಾದಂತಹ teaching and non-teaching, ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಅನುಮತಿಯನ್ನು ಕೊಡಬೇಕೆಂದು ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದೇ ರೀತಿ JOC ಯಿಂದ ನೇಮಕಾತಿಯಾಗಿರುವ ಶಿಕ್ಷಕರು ಒಳಗಡೆ ಇದ್ದಾರೆ ಅವರ ಬಗ್ಗೆ ಕ್ರಮ ಜರುಗಿಸಬೇಕು. ಸರ್ವ ಶಿಕ್ಷಣ ಅಭಿಯಾನದಲ್ಲಿ ಕಟ್ಟಡದ ಬಗ್ಗೆ ಹೇಳಿದ್ದಾರೆ.

ಮತ್ತೆ ಅದನ್ನು ನಾನು repeat ಮಾಡುವುದಕ್ಕೆ ಹೋಗುವುದಿಲ್ಲ. ಗ್ರಾಮೀಣ ಶಿಕ್ಷಕರ ಸಮಸ್ಯೆ ಅದು ಅಲ್ಲಿಯೇ ಉಳಿದುಕೊಳ್ಳಬಾರದು. ಅದನ್ನೂ ತಾವು ಬಗೆಹರಿಸಬೇಕು. ಶಿಕ್ಷಕರಿಗೆ ಪ್ರಶಸ್ತಿ ಕೊಡುವ ವಿಚಾರದಲ್ಲಿ ಯಾರೋ ರಾಜಕೀಯದಿಂದ ಬಂದವರಿಗೆ ಕೊಡುವುದು ಬೇಡ. ನಿಷ್ಠೆಯಿಂದ ಯಾರು ಒಳ್ಳೆಯವರಿರುತ್ತಾರೆ ಅವರಿಗೆ ಕೊಡಿ. ಅದಕ್ಕೊಂದು ಸಮಿತಿ ಮಾಡಿ ನಿರ್ಣಯ ಮಾಡಿ ಕೊಡಿ.

ಶ್ರೀ ವೈ.ಎಸ್.ವಿ.ದತ್ತಾ:- ಮಾನ್ಯ ಕಿಮ್ಮನೆ ರತ್ನಾಕರ್‌ರವರೆ, ಸಮವಸ್ತ್ರದ ಬಗ್ಗೆ Handloom Development Corporation ನವರಿಗೆ ಕೊಡದೇ ಹೋದರೆ 50,000 ಕುಟುಂಬಗಳು ಬೀದಿಗೆ ಬೀಳುತ್ತವೆ. ದಯವಿಟ್ಟು ನೇಕಾರರಿಗೆ ಕೆಲಸ ಕೊಡಿ.

(ಗೊಂದಲ)

ಶ್ರೀ ಸಿ.ಎನ್.ಬಾಲಕೃಷ್ಣ:- ನೇಕಾರರಿಂದ ಖರೀದಿ ಮಾಡಿ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ:- ಶಾಲಾ ಕಾಲೇಜುಗಳನ್ನು ಕಟ್ಟಲು ಜಾಗಗಳು ಇಲ್ಲ. ನಗರಾಭಿವೃದ್ಧಿ ಪ್ರಾಧಿಕಾರಗಳು ಎಂದು ಇವೆ. C.A. site ಎಂದು ಬಿಡುತ್ತಾರೆ. ಅವುಗಳನ್ನು ಇಟ್ಟುಕೊಂಡು ಮಾರಾಟ ಮಾಡಿಬಿಡುತ್ತಾರೆ. ಶಾಲೆಗಳಿಗೆ ಜಾಗ ಬಿಟ್ಟಿರುವುದನ್ನು compulsory ಆಗಿ ಶಾಲೆಗಳಿಗೆ ಎಂದು ತೆಗೆದುಕೊಂಡು ಮಾಡಬೇಕೆಂದು ಹೇಗೆ ಸುಗ್ರೀವಾಜ್ಞೆ ಹೊರಡಿಸುತ್ತೀರೋ ಹಾಗೆ ಹೊರಡಿಸಿ, ಸಿಟಿಯೊಳಗೆ ಅದೊಂದು ದಂಧೆಯಾಗಿದೆ. ದಯವಿಟ್ಟು ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಉಪಾಧ್ಯಕ್ಷರು:- ಮಾನ್ಯ ಸಚಿವರೆ ಉತ್ತರ ಕೊಡಿ.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಉಪಾಧ್ಯಕ್ಷರೆ, ಹಲವು ಮಾನ್ಯ ಸದಸ್ಯರುಗಳು civil works ನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಾಸ್ತವದಲ್ಲಿ ಅದು State tender ಆಗಿರುವಂಥದ್ದು ನಮ್ಮ ಅವಧಿಯಲ್ಲಿ ಅಲ್ಲ. ನಾವು

ಬರುವುದಕ್ಕಿಂತ ಮುಂಚಿತವೇ state tender ಆಗಿ approval ಆಗಿ ಬಂದಿರತಕ್ಕಂಥದ್ದು. ಈಗ ಅನುಷ್ಠಾನ ಮಾಡುವುದರೊಳಗೆ ಏನಿದೆ, ಮಾನ್ಯ ಸಿ.ಎನ್.ಬಾಲಕೃಷ್ಣರವರು ಹೇಳಿದರು, ಏನು ಹಿಂದೆ proposal ಆಗಿತ್ತು ಅದರ ಬದಲಾವಣೆಗೆ ಕೂಡ ನಾನು ಪ್ರಯತ್ನ ಮಾಡುತ್ತಿದ್ದೇನೆ. ಕೆಲವರು 4–5 ವರ್ಷಗಳ ಹಿಂದೆ proposal ಕೊಟ್ಟಿದ್ದಾರೆ. ಈಗ ಅಲ್ಲಿ ಮಕ್ಕಳೇ ಇಲ್ಲ. ಮಾನ್ಯ ಬಿ.ಆರ್.ಪಾಟೀಲ್‌ರವರೂ ಅಂತಹ ಘಟನೆಗಳು ನಡೆದಿವೆ ಎಂದು ಹೇಳಿದರು. ಹಾಗೇನಾದರೂ ಇದ್ದರೆ ನೀವು ನೇರವಾಗಿ ತಿಳಿಸಿದರೆ ಬದಲಾವಣೆ ಮಾಡಲು ಪ್ರಯತ್ನ ಮಾಡುತ್ತೇವೆ ಮತ್ತು ಇನ್ನು ಆರು ತಿಂಗಳೊಳಗೆ ಏನು allegations ಇದೆ ಅದನ್ನೂ ಕೂಡ ನಾವು ಸರಿ ದಾರಿಗೆ ತರುತ್ತೇವೆ. ಎಲ್ಲಾ ಕಟ್ಟಡಗಳನ್ನು ಇನ್ನು ಆರು ತಿಂಗಳಿನಲ್ಲಿ ಸರಿ ಮಾಡಬೇಕೆಂದು ಈಗಾಗಲೇ 7–8 ಮೀಟಿಂಗ್ ಕರೆದು ಅಧಿಕಾರಿಗಳಿಗೆ instructions ಕೊಟ್ಟಿದ್ದೇವೆ. I will see that it will be done within 6 months. ಏನು complete ಆಗಬೇಕೋ ಅದಕ್ಕೆ ಪೂರಕವಾಗಿರುವಂತಹ ಪ್ರಯತ್ನ ಮಾಡಿದ್ದೇನೆ.

ಶ್ರೀ ಸಿ.ಎನ್.ಬಾಲಕೃಷ್ಣ:– ಸಾರ್, primary ಕಟ್ಟಡಗಳ ಬಗ್ಗೆ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಅವರು ಕೆಲಸವನ್ನೇ start ಮಾಡಿಲ್ಲವಲ್ಲಾ ಅದಕ್ಕೆ ಏನು ಮಾಡುತ್ತೀರಿ?

ಶ್ರೀ ಕಿಮ್ಮನೆ ರತ್ನಾಕರ್:– ಮಾಡಿಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:– Contractor ರವರು ನಿಮಗೂ ಅವರಿಗೂ ಸಂಬಂಧವೇ ಇಲ್ಲದ ರೀತಿಯಲ್ಲಿ ಮಾತನಾಡುತ್ತಾರೆ. ರಾಜ್ಯ ಸರ್ಕಾರಕ್ಕೆ ಸಂಬಂಧವೇ ಇಲ್ಲ.

ಶ್ರೀ ಎನ್.ಹೆಚ್.ಕೋನರೆಡ್ಡಿ:– ಅವರು ಬಿ.ಜೆ.ಪಿ.ಗೆ ಸಂಬಂಧ ಇರುವ ರೀತಿ ಇದ್ದಾರೆ.

ಉಪಾಧ್ಯಕ್ಷರು:- ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಕುಮಾರಸ್ವಾಮಿಯವರು ಕಟ್ಟಡ ಆರಂಭ ಆಗದೇ ಇರುವ ಬಗ್ಗೆ ಪ್ರಸ್ತಾಪ ಮಾಡಿದರು. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ನಮ್ಮದು ಕಾರ್ಯಕ್ರಮ ಇದೆ, ಎಲ್ಲೆಲ್ಲಿ ಅನುಷ್ಠಾನಕ್ಕೆ ಟೆಂಡರ್ ಆಗಿ ಕಾಮಗಾರಿಯನ್ನು ಹಿಡಿದಿದ್ದಾರೆ, ಆ ಎಲ್ಲಾ ಸ್ಥಳಗಳಿಗೆ ಪ್ರತ್ಯೇಕ ತಂಡವನ್ನು ಕಳುಹಿಸಿ ಯಾವ ಪರಿಸ್ಥಿತಿ ಇದೆ? ಅನುಷ್ಠಾನ ಮಾಡಬೇಕು ಅದನ್ನು ಮಾಡತಕ್ಕಂಥ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇನೆ. ಇದರೊಳಗೆ ಯಾವುದೇ ರೀತಿಯ ಗೊಂದಲ ಬೇಡ. ಪರಿವರ್ತನೆಗೆ ಯಾವುದಾದರೂ ಇದ್ದರೂ ಕೂಡ ಅದನ್ನೂ ಕೂಡ ಈಗಾಗಲೇ ಪ್ರಾರಂಭವಾಗದೇ ಇದ್ದರೆ, ಅಕಸ್ಮಾತ್ ಇದ್ದರೆ, ಏಕೆಂದರೆ ಏನಾಗಿದೆ ಎಂದರೆ ಹಿಂದಿನ ಶಾಸಕರು ಕೊಟ್ಟಿರುವಂಥದ್ದನ್ನು ಕಳೆದ ಬಾರಿ approval ಆಗಿದೆ. ಆಗ ಸ್ಕೂಲಿನ ಅಗತ್ಯ ಇತ್ತು. ಈಗ ಕಟ್ಟಡವೇ ಅಗತ್ಯವಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಶಾಸಕರನ್ನು ಕೇಳಲೇ ಇಲ್ಲ. ಅಧಿಕಾರಿಗಳೇ ಮಾಡಿರುವುದು. ನಮ್ಮನ್ನು ಕೇಳಲೇ ಇಲ. ನಾವು ಈಗಿನ ಶಾಸಕರಲ್ಲವೇ?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್:- ಶಾಸಕರನ್ನು ಕೇಳದೇ ಕಟ್ಟಡ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ನಾನು ಅದಕ್ಕೆ privilege ಹಾಕಿದ್ದೇನೆ. ಶಾಸಕರನ್ನು ಕರೆಯದೇ ಕಟ್ಟಡ ಕೆಲಸವನ್ನು ಪ್ರಾರಂಭ ಮಾಡಿದರು. ಅದು ಕೃಷ್ಣೇಗೌಡರಂತಹ ಅಧಿಕಾರಿ ಬಂದು ಅಲ್ಲಿನ Head Master ಗೆ ಕೆಲಸ ಏಕೆ ಪ್ರಾರಂಭ ಮಾಡಿಲ್ಲವೆಂದು ದಬಾಯಿಸುತ್ತಾನೆ. ಕೇಂದ್ರದ ಅನುದಾನ ಎಂದು ಶಾಸಕರು ಬೇಕಾಗಿಲ್ಲ. ಒಬ್ಬರು ಕೃಷ್ಣೇಗೌಡ ಎಂಬ ಅಧಿಕಾರಿ ಇದ್ದಾರೆ.

ಶ್ರೀ ಕಿಮ್ಮನೆ ರತ್ನಾಕರ್:- ಈಗ ಬದಲಾವಣೆ ಮಾಡಿದ್ದೇನೆ. ಆದ್ದರಿಂದ civil works ಏನು problem ಇದೆ, that we are going to solve it. ಮಾನ್ಯ

ಸಿ.ಎನ್.ಬಾಲಕೃಷ್ಣರವರು ಏನು ಹೇಳಿದ್ದೀರಿ, ಹಿಂದೆ ಅನುಮೋದನೆಯಾಗಿರುವಂತಹ ಯಾವುದೇ ಕಾಮಗಾರಿಗಳನ್ನು ನಾವು ನಿಲ್ಲಿಸುವುದಿಲ್ಲ ಮತ್ತೆ ನಾವೇನು 40 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. it is an additional grant. ನೀವು ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. ಹಿಂದೆ ಆಗಿರುವಂತಹ RIDF ಆಗಲಿ.

ಶ್ರೀ ಸಿ.ಎನ್.ಬಾಲಕೃಷ್ಣ:- ಸಾರ್ ನಾನು primary ಯದ್ದು ಕೇಳುತ್ತಿರುವುದು. ಹೊಸ ಕಟ್ಟಡಗಳು, ಹೊಸ ಶಾಲೆಗೆ ಅದರ ಬಗ್ಗೆ ಕೇಳುತ್ತಿದೇನೆ.

ಶ್ರೀ ಕಿಮ್ಮನೆ ರತ್ನಾಕರ್:- ಗೊತ್ತಾಯಿತು.

ಶ್ರೀ ಸಿ.ಎನ್.ಬಾಲಕೃಷ್ಣ:- ಸಾರ್, ದಯಮಾಡಿ ನಾನು RMS ಕೇಳುತ್ತಿಲ್ಲ. Primary School ಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 20–20 ಲಕ್ಷ ರೂ.ಗಳನ್ನು ಕೊಡುವುದು ಹಿಂದಿನಿಂದಲೂ ಆಗಿದೆ.

ಶ್ರೀ ಕಿಮ್ಮನೆ ರತ್ನಾಕರ್:- ನಾನು ಅದನ್ನೇ ಹೇಳುತ್ತಿದ್ದೇನೆ. ನೀವು ಹೇಳಿರುವುದನ್ನು ನಾನು correct ಆಗಿ ನೆನಪಿಟ್ಟುಕೊಂಡಿದ್ದೇನೆ. ಹಿಂದೆ ಏನಾಗಿತ್ತು ಅದನ್ನು ನಿಮ್ಮ ಅನುಮತಿ ಇಲ್ಲದೇ ನಾವು ಬದಲಾವಣೆ ಮಾಡುವುದಿಲ್ಲ. ನಾವು ಈಗ ಕೊಡುವಂತಹ ಹಣಕ್ಕೂ ಅದಕ್ಕೂ ಸಂಬಂಧ ಇಲ್ಲ. ಈಗಾಗಲೇ 64 ಕೋಟಿ ರೂ.ಗಳ ಹಣ RIDF ನಲ್ಲಿ amount ಬಂದಿದೆ, that will be continued. ಅದನ್ನು ನಾವು stop ಮಾಡುವಂತಹ ಪ್ರಶ್ನೆಯೇ ಇಲ್ಲ. ಹಿಂದೆ RMS ನಲ್ಲಿ ಏನು ಮಂಜೂರಾಗಿತ್ತು ಅದನ್ನು ನಾವು ಬದಲಾವಣೆ ಮಾಡುವುದಕ್ಕೆ ಹೋಗುವುದಿಲ್ಲ. Unless ಶಾಸಕರು ಯಾರಾದರೂ ಇದನ್ನು ಬದಲಾವಣೆ ಮಾಡಬೇಕು ಅಲ್ಲಿ ಅಗತ್ಯವಿಲ್ಲವೆಂದರೆ ಅಂತಹ ಸಂದರ್ಭದಲ್ಲಿ ಅದನ್ನು ಕೈಗೆತ್ತಿಕೊಳ್ಳುತ್ತೇವೆ ಇಲ್ಲವೆಂದರೆ ಮಾಡುವುದಿಲ್ಲ. ಈ grant, it is an additional grant. ಮಾನ್ಯ ಮುಖ್ಯಮಂತ್ರಿಗಳು ಈ ಅವ್ಯವಸ್ಥೆಯನ್ನು ನೋಡಿ ಏನಾದರೂ ಮಾಡಲೇಬೇಕೆಂದು ಗಮನಹರಿಸಿ ಕೊಟ್ಟಿರುವಂತಹ ಗ್ರಾಂಟಾಗಿದೆ. ಇದನ್ನು

ನಮ್ಮ ಇಲಾಖೆಯಿಂದಲೇ ಮಾಡಬೇಕೆಂಬ ಯೋಚನೆ ಇದ್ದರೂ ಕೂಡ ಆ ಬಗ್ಗೆ ಯೋಚನೆ ಮಾಡದೆಯೇ ಎಲ್ಲಾ ಶಾಶಕರಿಗೂ ಕೊಡಬೇಕೆಂದು ಯೋಚನೆ ಮಾಡಿದ್ದೇನೆ.

ಶ್ರೀ ಜೆ.ಟಿ.ಪಾಟೀಲ್:- ಮಾನ್ಯ ಮಂತ್ರಿಗಳು ಸಮವಸ್ತ್ರದ ಬಗ್ಗೆ ಹೇಳಿಲ್ಲ.

ಶ್ರೀ ಕಿಮ್ಮನೆ ರತ್ನಾಕರ್:- ನಾನು ಎರಡು ನಿಮಿಷ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.,

ಉಪಾಧ್ಯಕ್ಷರು:- ನೀವುಗಳು ಈ ರೀತಿಯಾಗಿ ಪದೇಪದೇ ಕೇಳುತ್ತಿದ್ದರೆ ಹೇಗೇ?

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಸದಸ್ಯರಾದ ಶ್ರೀ ನರೇಂದ್ರಸ್ವಾಮಿಯವರ ಪ್ರಶ್ನೆಯ ಬಗ್ಗೆ ಹೇಳಬೇಕೆಂದರೆ ಅಲ್ಲಿ ಏನಾಗಿದೆ ಎಂದರೆ ಅತಿಥಿ ಶಿಕ್ಷಕರ ಏನಾಗಿದೆ ಎಂದರೆ, ಇನ್ನು ಮುಂದೆ ಯಾವುದೇ ಕಾರಣಕ್ಕೂ ಖಾಯಂ ಮಾಡುವಂತಹ ಪ್ರಶ್ನೆಯೇ ಇಲ್ಲ. ಈ ವರ್ಷ ನಾವು 16,770 ಟೀಚರ್ಸ್‌ಗಳನ್ನು appointment ಮಾಡಿಕೊಳ್ಳುತ್ತಿದ್ದೇವೆ. Within November 31st ಆಗಿ ಹೋಗುತ್ತದೆ. ನಮಗೆ ಕೇವಲ 28,000 ಮಾತ್ರ ಅಗತ್ಯ ಇರುವುದು. ಈ 28,000 ದಲ್ಲಿಯೂ ಕೂಡ ನಮ್ಮ ratio ಏನಿದೆ, ಅದು 27 ಇದೆ. ಚಿಕ್ಕಮಗಳೂರು, ಶಿವಮೊಗ್ಗ ಎಲ್ಲಾ 12, 13 ರೀತಿ ಇದೆ. ಒಂದು ಸಾರಿ appointment ಮಾಡುವುದು ಮುಗಿದುಹೋಗಿಬಿಟ್ಟರೆ ಮುಗಿದುಹೋಗುತ್ತದೆ. ಇನ್ನು ಎರಡು ಸಾರಿ ತೆಗೆದುಕೊಂಡರೆ ಅದು close ಆಗಿಬಿಡುತ್ತದೆ. Actually ದೀರ್ಘವಾಗುತ್ತದೆ ಎಂದು ಅದನ್ನು ಹೇಳುವುದಕ್ಕೆ ಹೋಗಲಿಲ್ಲ. ಈಗ ಏನು ಮಾಡಿದ್ದೇವೆಂದರೆ, ನಾವು Primary Teachersಗೆ ತಿಂಗಳಿಗೆ 5,000 ರೂಪಾಯಿಗಳನ್ನು ಕೊಡುತ್ತೇವೆ. ಆ ಮೇಲಿನವರಿಗೆ 6,000 ಮತ್ತು 7,200 ರೂಪಾಯಿಗಳನ್ನು ಕೊಡುತ್ತೇವೆ. ನಾನು Principal Secretary ಯವರಿಗೆ ಕಳೆದ ಸಾರಿಯೇ ಇದ್ದಾಗ ಹೇಳಿ ಆ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಯಾರು highest marks ತೆಗೆದಿದ್ದಾನೆ ಅವನಿಗೆ ಕೊಟ್ಟುಬಿಡಿ ಎಂದು

ಹೇಳಿದ್ದೇನೆ. ಹಿಂದೆ ಒಂದು ಸಾರಿ highest merit ಇದ್ದವರಿಗೆ ಕೊಡಿ ಎಂದು ಈ ಬಗ್ಗೆ orders ಆಗಿತ್ತು. ರಾಣೆಬೆನ್ನೂರಿನ ಒಬ್ಬ highest merit ಇದ್ದವನು ತೀರ್ಥಹಳ್ಳಿಗೆ ಬಂದು ಅರ್ಜಿ ಹಾಕಿಬಿಟ್ಟಿದ್ದ, ಆದರೆ ಅವನು ಇಲ್ಲಿಗೆ ಬರುವುದೇ ಇಲ್ಲ. 5,200 ರೂಪಾಯಿ ಸಂಬಳಕ್ಕೆ ರಾಣೆಬೆನ್ನೂರಿನಿಂದ ತೀರ್ಥಹಳ್ಳಿಗೆ ಏತಕ್ಕೆ ಬರುತ್ತಾರೆ? ಅದಕ್ಕೆ ಏನು ಮಾಡಿದೆ ಎಂದರೆ, ಆ ಗ್ರಾಮ ಪಂಚಾಯತಿಯಲ್ಲಿ Head Master ಹತ್ತಿರ ಅರ್ಜಿ ಕೊಟ್ಟರೆ ಸಾಕು, ಮತ್ತೆ ಬಿ.ಇ.ಓ. ಅಲ್ಲಿಯೂ ಟೆಂಡರ್ ಕರೆಯುವುದು ಬೇಡ ಎಂದು ಮಾಡಿದ್ದೇವೆ. ಗ್ರಾಮಪಂಚಾಯತಿಯಲ್ಲಿ ಯಾರು ಓದಿದವರು ಇಲ್ಲದೇ ಇದ್ದರೆ, ಆದರೆ ಹೋಬಳಿಯಲ್ಲಿ ಇರಲಿ, ಹೋಬಳಿಯಲ್ಲಿ ಯಾರೂ ಸಿಗದಿದ್ದರೆ ತಾಲ್ಲೂಕಿಗೆ ಬರಲಿ, ಆ ರೀತಿಯಾಗಿ I wanted to avoid the corruption at the level of B.E.O. ಕೇವಲ 8 ದಿನದಲ್ಲಿಯೇ orders ಮಾಡಿ 1,000 ದಿಂದ 1,500 ಜನರು ತೀರ್ಥಹಳ್ಳಿಗೆ ಬಿಇಒಗೆ ನನಗೆ ಕೆಲಸ ಕೊಡಿ ಎಂದು ಅರ್ಜಿಯನ್ನು ಕೊಟ್ಟರು. ಮಾರನೇ ದಿನವೇ ನಾನು ತೀರ್ಥಹಳ್ಳಿಯಿಂದ ಬಂದು ಆ order ಅನ್ನು cancel ಮಾಡಿ ಮಾರನೇ ದಿನ ಅದನ್ನು change ಮಾಡಿದೆದೆ, ಏಕೆಂದರೆ ನಾವು ಕೊಡುವ 5,000 ಸಂಬಳಕ್ಕೆ ಸುಮ್ಮನೆ ಅವರು ಇಲ್ಲಿಗೆ ಬರುವುದಕ್ಕೆ ಹಿಂಸೆ ಆಗುತ್ತದೆ ಎಂದು ಮಾಡಿದ್ದೇವೆ. ಬಹಳಷ್ಟು ಕಡೆಗಳಲ್ಲಿ Guest Teachers ಇಲ್ಲ. ಗುಲ್ಬರ್ಗಾ ಕಡೆಯಲ್ಲಿ Guest Teachers ಗಳಾಗಿ ಯಾರೂ ಬರುತ್ತಿಲ್ಲ. ಅಲ್ಲಿ ಅರ್ಜಿ ಹಾಕುವವರೇ ಇಲ್ಲ. ಅಲ್ಲಿ eligibility ಯೇ ಕಡಿಮೆ ಇದೆ. ಗುಲ್ಬರ್ಗಾದಲ್ಲಿ ಬಹಳ ಸಮಸ್ಯೆ ಇದೆ. ಗುಲ್ಬರ್ಗಾ, ಬೀದರ್, ಯಾದಗಿರಿ, ಹೆಚ್.ಡಿ.ಕೋಟೆ ಮತ್ತು ಚಾಮರಾಜನಗರ including Chitradurga ಬಹಳ suffering districts. ಇಲ್ಲಿ ಅರ್ಧಕ್ಕೆ ಅರ್ಧ ಟೀಚರ್ಸ್‌ಗಳು ಇಲ್ಲ. ಇದು ನಮ್ಮ ಗಮನದಲ್ಲಿದೆ. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಂತಹ ಪ್ರಯತ್ನ ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಮಾನ್ಯ ಶಿವಾನಂದ ಎಸ್.ಪಾಟೀಲ್‌ರವರು ಏನು ಹೇಳಿದ್ದಾರೆ ಅದಕ್ಕೆ ನಾನು ಸೋಮವಾರವೇ ಆದೇಶವನ್ನು ಕಳುಹಿಸಿ ಅವರಿಗೆ ನಿರ್ದೇಶನವನ್ನು ಕೊಟ್ಟು ಯಾರು property ಅನ್ನು ಕೊಟ್ಟಿದ್ದಾರೆ. 5.00 ರೂಪಾಯಿಗಳ ದುಡ್ಡು ಕೊಡದೇ

ಇರುವಂತಹ ಪರಿಸ್ಥಿತಿಯಲ್ಲಿ ಅವರು ತಮ್ಮ ಆಸ್ತಿಯನ್ನು ಕೊಟ್ಟು ಅವರು ಹೆಸರಿಗಾಗಿ ಇಷ್ಟು ದಿನ ಕಾಯುವುದರೊಳಗೆ ಅದು ಇಲಾಖೆಯ ನ್ಯೂನ್ಯತೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. We will do it in next week.

ಶ್ರೀ ಜೆ.ಟಿ.ಪಾಟೀಲ್:– ಮಾನ್ಯ ಸಚಿವರೆ, ತಾವು ಸಮವಸ್ತ್ರ ಬಗ್ಗೆ ಹೇಳಲಿಲ್ಲ. ತಾವು ಸಮವಸ್ತ್ರಗಳನ್ನು ಕೈಮಗ್ಗದ ನಿಗಮದ ಮುಖಾಂತರ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು:– ಗುಲ್ಬರ್ಗಾ ಆ ಕಡೆಯ ಭಾಗದಲ್ಲಿ ವಿದ್ಯಾವಿಕಾಸ ಏನು ಇದೆ ನೇಕಾರರಿಗೆ ಕೊಡುವಂತಹದ್ದು ಆಗಬೇಕು. ಆ ಕಡೆಯ ಭಾಗದಲ್ಲಿ ಸಮಸ್ಯೆಯಾಗಿದೆ. Handloom Development Corporatioin ಕೊಡುವುದು.

ಶ್ರೀ ಕಿಮ್ಮನೆ ರತ್ನಾಕರ್:– ನಾನು ಅವರಿಗೆ 100% ಕೊಡಬೇಕೆಂಬುವುದರಲ್ಲಿ ಯೋಚನೆಯಲ್ಲಿರುವವನು. ಬಹುಶಃ ನಾನು ಯಾವ ರೀತಿಯಾಗಿ ಯೋಚನೆ ಮಾಡುತ್ತಿದ್ದೇನೆಂದರೆ, ಇಷ್ಟರೊಳಗೆ ಆಗಿರುವುದಕ್ಕೆ ನಾನು ಕಾರಣನಲ್ಲ. ಯಾರು ದುಡಿಮೆಗಾರರು ಇದ್ದಾರೆ, ಯಾರು ತುಳಿತಕ್ಕೆ ಒಳಗಾಗಿರುವವರು ಇದ್ದಾರೆ ಅವರಿಗೆ ಕೊಡುವಂತಹ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ಏನಾದರೂ orders ಆಗಿದ್ದರೆ I will withdraw it.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಮಾನ್ಯ ಸಚಿವರು ವಸತಿ ಗೃಹಗಳ ಬಗ್ಗೆ ಹೇಳಲಿಲ್ಲ ಅದು ಖಾಲಿ ಬಿದ್ದಿದೆ.

ಶ್ರೀ ಬಿ.ಆರ್.ಪಾಟೀಲ್:– ಮಾನ್ಯ ಸಚಿವರು 7ನೇ ತರಗತಿ ಮತ್ತು 8ನೇ ತರಗತಿಯ ಬಗ್ಗೆ ಹೇಳಲಿಲ್ಲ. ಇದು confusion ಆಗಿ ಇದರಲ್ಲಿ ಗೊಂದಲ ಇದೆ ಇದರ ಬಗ್ಗೆ ಹೇಳಬೇಕು.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಲಮಾಣಿಯವರೆ ತಾವು ಕುಳಿತುಕೊಳ್ಳಿ. ಬಿ.ಆರ್.ಪಾಟೀಲ್‌ರವರು ಕೇಳಿರುವ ಪ್ರಶ್ನೆಗೆ ನನಗೆ ಗೊತ್ತಿದ್ದರೂ ನಾನು ಸುಮ್ಮನಾದೆ ಏಕೆಂದರೆ it needs 15 minutes to

answer. ಅಲ್ಲಿ problem ಏನಾಗಿದೆ ಎಂದರೆ, 2009ರಲ್ಲಿ All India Education Policy implement ಆಗಿರುವುದು. ನಮ್ಮ ದೇಶದಲ್ಲಿ ಯಾವಾಗಲೂ ಕೂಡ ನ್ಯೂನ್ಯತೆಗಳು ಇವೆ. ನಾವು programme announce ಮಾಡಿ ಆಮೇಲೆ plan ಮಾಡುತ್ತೇವೆ. We should plan the things and then go *for the programme*. But it is a mistake. *Actually 2009*ನಲ್ಲಿ ನಾವು All India Education Policy ಅನ್ನು implement ಮಾಡುತ್ತೇವೆಂದು ತೆಗೆದುಕೊಂಡ ದಿನ ನಾವು ನಮ್ಮ line of thoughts ಅನ್ನು line of policy ಅನ್ನು ಯಾವ ರೀತಿಯಾಗಿ implement ಮಾಡುವುದು ಎಂದು. ಅಲ್ಲಿ ಏನಾಗಿದೆ ಎಂದರೆ,

ಉಪಾಧ್ಯಕ್ಷರು:– ಮಾನ್ಯ ಸಚಿವರೆ, ಈ ಬಗ್ಗೆ details ಹೇಳುವುದು ಬೇಡ.

ಶ್ರೀ ಕಿಮ್ಮನೆ ರತ್ನಾಕರ್:– ಅವರಿಗೆ ನಾನು ಹೇಳುವುದರಿಂದ ಸಮಸ್ಯೆ ಏನಾಗಿದೆ ಎಂದು ಅರ್ಥವಾಗಿಬಿಡುತ್ತದೆ. 6 ಮತ್ತು 7ನೇ ತರಗತಿದು ಏನಿದೆ, ಇಲ್ಲಿ 5–6–7 ಇದು Middle School ಈಗ ಇರುವುದು. ಅಲ್ಲಿ ಟೀಚರ್ಸ್ ಇದ್ದಾರೆ. ಅಲ್ಲಿ ಟೀಚರ್ಸ್ ಇರುವವರು ಯಾರು, ಟಿಸಿಹೆಚ್ ಮತ್ತು ಬಿಎಡ್ ಆಗಿರುವವರು ಇದ್ದಾರೆ. 8ನೇ ಕ್ಲಾಸ್‌ನದು 7ನೇ ಕ್ಲಾಸ್‌ನ ಜೊತೆಗೆ ಬಂದುಬಿಟ್ಟಿದೆ. All India Education Policyಯಲ್ಲಿ ನಾವು ಈಗ 5 ವರ್ಷ ದಾಟಿ ಹೋಗಿ ಆಗಿದೆ. The Karnataka Government has accepted All India Education Policy. ಈಗ admit ಮಾಡಿಕೊಂಡ ಮೇಲೆ 8ನೇ ತರಗತಿಯನ್ನು 7ನೇ ತರಗತಿಗೆ ನಾವು ಈಗ ತೆಗೆದುಕೊಂಡು middle schoolಗೆ *ಸೇರಿಸಬೇಕು*. ಅವರನ್ನು ಇಲ್ಲಿಗೆ *ಸೇರಿಸಿದಾಗ* ಟಿಸಿಹೆಚ್ ಮಾಡಿರುವವರು ಅವರಿಗೆ ಟೀಚ್ ಮಾಡುವುದ್ಕಾಗುವುದಿಲ್ಲ. ಟಿಸಿಹೆಚ್ ಮಾಡಿರುವವರಿಗೆ qualification ಇರುವುದಿಲ್ಲ. High Schoolನಲ್ಲಿ ಸುಮಾರು, 5,00,000 ಮಕ್ಕಳು ಕಡಿಮೆ ಆಗುತ್ತಾರೆ. ಅಲ್ಲಿ teachersಗಳು excess ಆಗುತ್ತಾರೆ. ಆ teachersಗಳನ್ನು ಇಲ್ಲಿಗೆ ಅಂದರೆ middle schoolಗೆ ಕರೆದುಕೊಂಡು ಬಂದು ಪಾಠ ಮಾಡಿಸುವುದಕ್ಕಾಗುವುದಿಲ್ಲ. Actually

department should have think about it thousand times at the time of accepting it. ಇದನ್ನು ಏನು ಮಾಡಬೇಕು? ಈಗ ಏನಾಗಿದೆ ಎಂದರೆ, ಇವರನ್ನು ಅಲ್ಲಿಗೆ Transfer ಮಾಡುವ ಹಾಗಿಲ್ಲ ಅವರನ್ನು ಇಲ್ಲಿಗೆ transfer ಮಾಡುವ. Eligibility ಇವರಿಗೆ ಕಡಿಮೆಯಾಗುತ್ತದೆ, ಅವರಿಗೆ ಅದು ಜಾಸ್ತಿಯಾಗುತ್ತದೆ. It is a transition period. We are trying hard how to accommodate ಅಂತ. Actually ನಾವು last leg ನಲ್ಲಿದ್ದೇವೆ. ನಮ್ಮದು 5th year complete ಆಗಿಬಿಟ್ಟಿದೆ. It is a big problem, I admit it. ಆದ್ದರಿಂದ ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದನ್ನು ಯಾವ ರೀತಿಯಾಗಿ ಸರಿಪಡಿಸಬೇಕು, ಆದರೆ ಇದನ್ನು ಸರಿಪಡಿಸಲೇಬೇಕಾಗಿದೆ. ಈ Transitionನಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

SRI H.K.KUMARSWAMY:– But at present this policy is not in force.

ಉಪಾಧ್ಯಕ್ಷರು:– ವಾರ್ತಾ, ಯುವಜನ ಸೇವೆ ಮತ್ತು ಮೀನುಗಾರಿಕೆ ಸಚಿವರೆ ತಾವು ಮಾತನಾಡಿ.

ಇ) ಯುವಜನ ಸೇವೆಗಳ ಬೇಡಿಕೆಗೆ ಮಾನ್ಯ ಸಚಿವರ ಉತ್ತರ:

ಶ್ರೀ ಅಭಯಚಂದ್ರ(ಮಾನ್ಯ ಯುವಜನ ಸೇವೆ ಹಾಗೂ ಮೀನುಗಾರಿಕೆ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಒಳ್ಳೆಯ ಸಲಹೆಯನ್ನು ಕೊಟ್ಟು ಸಂಚಲನವನ್ನು ಹುಟ್ಟಿಸಿದ್ದಾರೆ. ಅವರಿಗೆ ನಾನು ಅಭಿನಂದಿಸುತ್ತೇನೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ನವರ ಸರ್ಕಾರವು ಹೊಸದಾಗಿ ಆರಂಭಿಸಿದ ಅನುಷ್ಠಾನಗೊಳಿಸಿರುವ ಪ್ರಮುಖ ಕಾರ್ಯಕ್ರಮಗಳು '2013–14ನೇ ಸಾಲಿನಲಿ ನಮ್ಮೂರ ಶಾಲೆಗಳಿಗೆ ನಮ್ಮೂರ ಯುವಜನರು' ಎಂಬ ಸ್ಕೀಮ್ ತಂದಿದ್ದೇವೆ. ಅದೇ ರೀತಿಯಾಗಿ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ